ಕರ್ನಾಟಕ ವಿಧಾನಸಭೆ

ಸೋಮವಾರ 31ನೇ ಮಾರ್ಚ್ 2003ರಂದು
ಸದನವು ವಿಧಾನಸಭೆಯಲ್ಲಿರುವ ಸಭಾಂಗಣದಲ್ಲಿ
ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು
ಪೀಠವನ್ನು ಅಲಂಕರಿಸಿದ್ದರು

1) ಅ. ಅಧ್ಯಕ್ಷರ ಅಪ್ಪಣೆ ಮೇರೆಗೆ ಸಿ.ಇ.ಟಿ. ಬಗ್ಗೆ ಸರ್ಕಾರದವರು ಸ್ಪಷ್ಟವಾದ ನಿರ್ಧಾರವನ್ನು ಪ್ರಕಟಿಸದೇ ಇರುವ ಬಗ್ಗೆ (ಧರಣಿ)

(ಅ) ವಿಷಯ:

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ಕಾರ್ಯಕಲಾಪವನ್ನು ಆರಂಭಿಸುವುದಕ್ಕಿಂತ ಮುಂಚೆ, ಇವತ್ತು ಅಧಿವೇಶನದ ಕೊನೆಯ ದಿವಸ, ಸಿಇಟಿ ಬಗ್ಗೆ ಸರ್ಕಾರ ತನ್ನ ಒಂದು ನಿರ್ಧಾರವನ್ನು ತೆಗೆದುಕೊಂಡು ತಮ್ಮ ನಿಲುವು ಏನೆಂಬುದನ್ನು ಹೇಳುತ್ತೇವೆ ಎಂದು ಹೇಳಿದ್ದರು, ಆದರೆ ನಿನ್ನೆ, ಇವತ್ತು ಪತ್ರಿಕೆಗಳಲ್ಲಿ ಬಂದಿದೆ, 31ನೇ ಮಾರ್ಚ್ 2003....

ಅಧ್ಯಕ್ಷರು:- ಒಂದು ಕೆಲಸ ಮಾಡೋಣ, ಸಂಬಂಧಿಸಿದ ಮಂತ್ರಿಗಳು ಬರಲಿ ನಂತರ ಈ ವಿಷಯವನ್ನು ತೆಗೆದುಕೊಳ್ಳೋಣ.

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು:- ಹದಿನೈದು ಜನರು ಒಟ್ಟಿಗೆ ಮಾತನಾಡುತ್ತಿದ್ದಾರೆ, ಬರೆದುಕೊಳ್ಳಬೇಡಿ.

(ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಲಾಗಿಲ್ಲ)

Mr. Speaker:- I have allowed Mr. Jagadish Shettar to speak. ಎಷ್ಟು ಸಲ ಅದನ್ನೇ ಹೇಳಲು ಆಗುತ್ತದೆ? ಶೆಟ್ಟರ್‌ರವರನ್ನು ಅಲೋ ಮಾಡಿದ್ದೇನೆ ಎಂದು ಈಗಾಗಲೇ ಹನ್ನೆರಡು ಸಲ ಹೇಳಿದ್ದೇನೆ. ತಾವು ಅರ್ಥಮಾಡಿಕೊಳ್ಳಬೇಕು. ತಾವೆಲ್ಲರೂ ಹಿರಿಯ ಸದಸ್ಯರಿದ್ದೀರಿ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ನಾನು ಅವರನ್ನು ಕರೆದಿದ್ದೇನೆ ಎಂದು ಹೇಳಿದಾಗ, ನೀವೆಲ್ಲರೂ ಎದ್ದು ಮಾತನಾಡಿದರೆ ಹೇಗೆ?

ಶ್ರೀ ಡಿ.ವಿ. ಸದಾನಂದಗೌಡ:- ತಾವು ಕೋಪಮಾಡಿಕೊಳ್ಳಬೇಡಿ ಸ್ವಾಮಿ. ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಅಧಿವೇಶನದ ಕೊನೆಯ ದಿವಸ. ತಾವು ನಗುನಗುತ್ತಾ ಬೀಳ್ಕೊಟ್ಟರೆ ನಮಗೂ ಸಂತೋಷ.

ಅಧ್ಯಕ್ಷರು:- ಕೋಪವಲ್ಲ ಸ್ವಾಮಿ. ಆಯಿತು, ಕೊನೆಯ ದಿವಸ ನೀವೂ ಸಹ ನನ್ನ ಜೊತೆ ಸಹಕರಿಸಿ.

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಇಡೀ ರಾಜ್ಯದಲ್ಲಿ ಗೊಂದಲ ನಿರ್ಮಾಣವಾಗಿದೆ. ಅದರಲ್ಲೂ, ಯಾರು ಬಡವಿದ್ಯಾರ್ಥಿಗಳಿದ್ದಾರೆ...

ಅಧ್ಯಕ್ಷರು:- ಕರಿಯಣ್ಣನವರೇ, ಡಾ: ಪರಮೇಶ್ವರ್‌ರವರು ಎಲ್ಲಿದ್ದಾರೆಂದು ನೋಡಿ, ಅವರನ್ನು ಕರೆಸಿ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಗೊಂದಲದ ಪರಿಸ್ಥಿತಿಯಲ್ಲಿದ್ದಾರೆ. ಮೇ 30 ಮತ್ತು 31ನೇ ತಾರೀಖು ಸಿಇಟಿ ಪರೀಕ್ಷೆಗಳನ್ನು ಪ್ರಾರಂಭ ಮಾಡುತ್ತೇವೆಂದು ಸರ್ಕಾರ ಅನೌನ್ಸ್ ಮಾಡಿತ್ತು. ವಿದ್ಯಾರ್ಥಿಗಳು ಈಗಾಗಲೇ ಫಾರಂಗಳನ್ನು ತೆಗೆದುಕೊಂಡಿದ್ದಾರೆ, ಎಲ್ಲವೂ ಆಗಿದೆ. ಈ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದರ ಬಗ್ಗೆ ಇಲ್ಲಿ ಈಗಾಗಲೇ 2-3 ಸಲ ಚರ್ಚೆಯಾಯಿತು. ಸುಪ್ರೀಂ ಕೋರ್ಟಿನ ತೀರ್ಪಿಗೆ ಪೂರಕವಾಗಿ ನಾವು ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ವಿಷಯದ ಬಗ್ಗೆ ಸದನದಲ್ಲಿ ಗಂಭೀರವಾದಂಥ ಚರ್ಚೆಯಾದಂಥ ಸಂದರ್ಭದಲ್ಲಿ ಡಾ: ಪರಮೇಶ್ವರ್‌ರವರು, ನಾವು ನಾಳೆ ಆಲ್ ಪಾರ್ಟಿ ಮೀಟಿಂಗ್ ಕರೆಯುತ್ತಿದ್ದೇವೆ, ಆ ಮೀಟಿಂಗ್‌ನಲ್ಲಿ ಒಂದು ನಿರ್ಣಯವನ್ನು ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದರು. ಆಲ್ ಪಾರ್ಟಿ ಮೀಟಿಂಗಿನಲ್ಲಿ ಏನಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ. 2-3 ದಿನಗಳಲ್ಲಿ ನಿರ್ಣಯವನ್ನು ತೆಗೆದುಕೊಂಡು, ಸರ್ಕಾರದ ಸ್ಪಷ್ಟ ನಿಲುವು ಏನು ಎನ್ನುವುದನ್ನು ಸದನದಲ್ಲಿ ಹೇಳುತ್ತೇವೆ ಎಂದು ಹೇಳಿದರು. ಒಂದು ಸಬ್ ಕಮಿಟಿಯನ್ನು ಮಾಡಿದರು. ಆ ಸಬ್ ಕಮಿಟಿ ಎಷ್ಟು ಸಲ ಸಭೆ ಸೇರಿತ್ತು? ಅಲ್ಲಿ ಅಂತಿಮವಾದಂಥ ಒಂದು ತೀರ್ಮಾನವನ್ನು ಕೈಗೊಂಡರೋ, ಇಲ್ಲವೋ, ಬೇರೆ ಏನಾದರೂ ನಿರ್ಣಯ ಕೈಗೊಂಡರೋ ಯಾವುದೂ ಗೊತ್ತಾಗಲಿಲ್ಲ. ಪ್ರೈವೇಟ್ ಮೇನೇಜ್‌ಮೆಂಟಿನವರು ಮಾರ್ಚ್ 31ರವರೆಗೆ ಗಡುವು ಕೊಟ್ಟಿದ್ದಾರೆ ಎಂದು ಪತ್ರಿಕೆಗಳಲ್ಲಿ ಬರುತ್ತಿದೆ. ಅದರ ಪ್ರಕಾರ ಇವತ್ತು ಲಾಸ್ಟ್ ಡೇಟ್. ನೀವು ಏನಾದರೊಂದು ನೀತಿಯನ್ನು ಅನೌನ್ಸ್ ಮಾಡದಿದ್ದರೆ, ಏಪ್ರಿಲ್ 3ನೇ ತಾರೀಖಿನಿಂದ ನಾವು ಅಡ್ಮಿಷನ್ಸ್ ಪ್ರಾರಂಭ ಮಾಡುತ್ತೇವೆ ಎನ್ನುವ ಹೇಳಿಕೆಯನ್ನು ಪ್ರೈವೇಟ್ ಮೇನೇಜ್‌ಮೆಂಟಿನವರು ಕೊಟ್ಟಿದ್ದಾರೆ. ಇನ್ನೆರಡು ದಿನಗಳಲ್ಲಿ ಏಪ್ರಿಲ್ 3ನೇ ತಾರೀಖು ಬರುತ್ತದೆ. ಆದರೂ, ಸರ್ಕಾರ ಇದರ ಬಗ್ಗೆ ತನ್ನ ಸ್ಪಷ್ಟ ನಿಲುವು ಏನು ಎನ್ನುವುದನ್ನು ಇದುವರೆಗೂ ಸ್ಪಷ್ಟನೆ ಮಾಡಿಲ್ಲ. ಹೀಗಾಗಿ, ಇವತ್ತು ಇಡೀ ವಿದ್ಯಾರ್ಥಿ ಸಮೂಹ ಮತ್ತು ಕರ್ನಾಟಕ ರಾಜ್ಯ ಇದರ ಬಗ್ಗೆ ಗೊಂದಲಕ್ಕೆ ಬಿದ್ದಿದೆ. ಆದ್ದರಿಂದ, ಸರ್ಕಾರ ಇದರ ಬಗ್ಗೆ ತನ್ನ ಸ್ಪಷ್ಟ ನೀತಿ ಏನು ಎನ್ನುವುದನ್ನು ಇವತ್ತು ಇಲ್ಲಿ ಹೇಳಬೇಕಾಗುತ್ತದೆ. ಮತ್ತೆ ನಾವು ಕ್ಯಾಬಿನೆಟ್ ಸೇರುತ್ತೇವೆ, ಅಲ್ಲಿ ತೀರ್ಮಾನ ಮಾಡುತ್ತೇವೆ ಎನ್ನುವಂಥ ನೆವಗಳನ್ನು ಮತ್ತೆ ಹೇಳುವಂಥಾದ್ದಾದರೆ, ಅದು ಸರಿಯಾದಂಥ ಉತ್ತರವಲ್ಲ. ಕೇರಳ ಮಾದರಿಯಲ್ಲಿ ಹೊಸದಾಗಿ ಒಂದು ಶಾಸನವನ್ನಾದರೂ ಮಾಡಬೇಕಾಗಿತ್ತು. ಆ ಬಗ್ಗೆ ನಾವು ಸಜೆಷನ್ ಮಾಡಿದೆವು. ನಾಳೆ ಕೋರ್ಟಿನಲ್ಲಿ ಅದು ನಿಲ್ಲುತ್ತದೋ, ಇಲ್ಲವೋ ಗೊತ್ತಿಲ್ಲ. ಆದರೆ, ನಿಮ್ಮ ಪ್ರಯತ್ನವನ್ನು ನೀವು ಮಾಡಬೇಕಾಗಿತ್ತು. ಜಡ್ಜ್‌ಮೆಂಟ್ ವಿರುದ್ಧವಾಗಿ ಒಂದು ಮೇಲ್ಮನವಿಯನ್ನು ಫೈಲ್ ಮಾಡಬೇಕಾಗಿತ್ತು. ಅದನ್ನೂ ಮಾಡಲಿಲ್ಲ. ಕೊನೆಯ ಪಕ್ಷ, ಇಂಡಿಪೆಂಡೆಂಟ್ ಆಗಿ ಈ ಸದನದಲ್ಲಿ ಕಾನೂನು ತರುವಂಥ ಪ್ರಯತ್ನವನ್ನು ಮಾಡಬೇಕಾಗಿತ್ತು. ಅದನ್ನೂ ಮಾಡಲಿಲ್ಲ. ಪ್ರೈವೇಟ್ ಮೇನೇಜ್‌ಮೆಂಟಿನವರ ಮೇಲೆ ಹಿಡಿತ ಸಾಧಿಸಲು ಯಾವ

ಪ್ರಯತ್ನವನ್ನೂ ಮಾಡಲಿಲ್ಲ. ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಸರ್ಕಾರಗಳು ಒತ್ತಡ ತೆಗೆದುಕೊಂಡು ಬಂದಿವೆ. ಕೇರಳ ಮತ್ತೆ ಸುಪ್ರೀಂ ಕೋರ್ಟಿಗೆ ಹೋಗಿದೆ. ಸುಪ್ರೀಂ ಕೋರ್ಟಿನಲ್ಲಿ ಮತ್ತೆ ನಮ್ಮ ನಿಲುವನ್ನು ಹೇಳಲು ಅವಕಾಶವಿದೆ. ಆ ರೀತಿಯ ಪ್ರಯತ್ನಗಳ್ಯಾವುದನ್ನೂ ನಮ್ಮ ರಾಜ್ಯ ಸರ್ಕಾರ ಮಾಡಲಿಲ್ಲ. ಹೀಗಾಗಿ, ಇವತ್ತು ಸಿಇಟಿ ಗೊಂದಲದ ಗೂಡಾಗಿ ನಿರ್ಮಾಣವಾಗಿದೆ. ಬಡ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದೊಡ್ಡದಾದ ಪೆಟ್ಟು ಬೀಳುವಂಥ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಗಿದೆ. ಸರ್ಕಾರದ ನಿರ್ಲಕ್ಷ್ಯತನದಿಂದ, ಬೇಜವಾಬ್ದಾರಿತನದಿಂದ ಇವತ್ತು ಈ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಒಂದು ಸ್ಪಷ್ಟ ನೀತಿಯಾಗಲಿ. ಇದು ಸುಪ್ರೀಂ ಕೋರ್ಟಿನ ತೀರ್ಪು ಆಗಿರುವುದರಿಂದ ನಮ್ಮ ಕೈಗಳು ಕಟ್ಟಿದಂತಾಗಿದೆ, ಅಂದರೆ ನಾವು ಅಸಹಾಯಕರಾಗಿದ್ದೇವೆ, ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರವೇ ನಾವು ನಡೆದುಕೊಳ್ಳಬೇಕಾಗುತ್ತದೆ ಎನ್ನುವ ಅರ್ಥ ಬರುವಂತೆ ಮುಖ್ಯ ಮಂತ್ರಿಗಳು ಪರೋಕ್ಷವಾಗಿ ಮಾತನಾಡಿರುವುದು ಅವರ ಅಸಹಾಯಕತೆಯನ್ನು ತೋರಿಸುತ್ತದೆ. ಸುಪ್ರೀಂ ಕೋರ್ಟಿನ ತೀರ್ಪಿಗೆ ವ್ಯತಿರಿಕ್ತವಾಗಿ ನಾವು ಏನೂ ಮಾಡಲೂ ಆಗುವುದಿಲ್ಲ ಎನ್ನುವ ಅಭಿಪ್ರಾಯ ಮುಖ್ಯಮಂತ್ರಿಗಳಲ್ಲಿ ಬರುತ್ತದೆ ಎಂದರೆ, ಅವರ ಸರ್ಕಾರ ಯಾವ ರೀತಿ ನಿರ್ಣಯಗಳನ್ನು ಕೈಗೊಳ್ಳುತ್ತದೆ ಎನ್ನುವ ದಿಕ್ಕನ್ನು ಅದು ತೋರಿಸುತ್ತದೆ. ಅದಕ್ಕಾಗಿ, ಸರ್ಕಾರ ಇವತ್ತು ಇದರ ಬಗ್ಗೆ ತಮ್ಮ ಸ್ಪಷ್ಟ ನಿಲುವನ್ನು ಹೇಳಬೇಕಾಗುತ್ತದೆ. ಸರ್ಕಾರ ತಕ್ಷಣವೇ ಇದಕ್ಕೆ ಉತ್ತರ ಕೊಡಲಿ. ಇವತ್ತು ಇದು ಕ್ಲಿಯರ್ ಆಗಬೇಕು. ಇದರ ಬಗ್ಗೆ ನಾವು ವಾರಗಟ್ಟಳೆ ಸದನದಲ್ಲಿ ಚರ್ಚೆ ಮಾಡಿದ್ದೇವೆ, ಆದರೆ ಸರ್ಕಾರ ತನ್ನ ತೀರ್ಮಾನವನ್ನು ಇವತ್ತು ಹೇಳುತ್ತೇವೆ, ನಾಳೆ ಹೇಳುತ್ತೇವೆ ಎಂದೇ ಹೇಳಿಕೊಂಡು ಬಂದಿದ್ದಾರೆ. ಇವತ್ತು ಅಧಿವೇಶನದ ಕೊನೆಯ ದಿವಸ. ಮತ್ತೆ ಸದನ ಸೇರುವುದು ಮೂರು ತಿಂಗಳ ನಂತರ. ಅಷ್ಟರಲ್ಲಿ ಅವರ ಗಡುವು ಮೇ 31 ಮುಗಿದು ಹೋಗಿರುತ್ತದೆ. ಅದಕ್ಕಾಗಿ ಸರ್ಕಾರ ಇವತ್ತೇ ತನ್ನ ನಿಲುವನ್ನು ಸ್ಪಷ್ಟನೆ ಮಾಡಬೇಕು ಎನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

ಅಧ್ಯಕ್ಷರು:- ಈಗ ಸೋಮಶೇಖರ್‌ರವರು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಬಿ.ಎನ್. ಬಚ್ಚೇಗೌಡರು ಮಾತನಾಡಲು ಎದ್ದು ನಿಂತರು).

ಅಧ್ಯಕ್ಷರು:- ಇವರ ಪಾರ್ಟಿ ಪರವಾಗಿ ಶೆಟ್ಟರ್‌ರವರು ಮಾತನಾಡಿದ್ದಾರೆ. ನಿಮ್ಮ ಪಾರ್ಟಿ ಪರವಾಗಿ ಸೋಮಶೇಖರ್‌ರವರು ಹೇಳುತ್ತಾರೆ. ಒಂದೊಂದು ಪಾರ್ಟಿಯಿಂದ ಒಬ್ಬೊಬ್ಬರು ಸಾಕು. ಶೂನ್ಯವೇಳೆಯಲ್ಲಿ ಒಂದೊಂದು ಪಾರ್ಟಿಯಿಂದ ಒಬ್ಬೊಬ್ಬರು ಮಾತನಾಡಿದರೆ ಸಾಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಬೇರೆ ಯಾವುದೇ ವಿಷಯದ ಚರ್ಚೆಗಿಂತ ಇದು ಬಹಳ ಮುಖ್ಯವಾದುದು. ಬಿಲ್ಸ್ ಪಾಸ್ ಆಗುವುದು, ಕೊಶ್ಚನ್ ಅವರ್ ಇವೆಲ್ಲಾ ಇರಲಿ. ಇದು ಬಹಳ ಮುಖ್ಯವಾದ ವಿಚಾರ.

ಅಧ್ಯಕ್ಷರು:- ಒಪ್ಪಿಕೊಂಡೆ, ಸ್ವಾಮಿ, ಸೋಮಶೇಖರ್‌ರವರು ನಿಮ್ಮ ಪಾರ್ಟಿಯವರಲ್ಲವೇ, ಅವರು ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್:- ಸೆಲ್ಫ್ ಅಸೆಸ್‌ಮೆಂಟ್ ಟ್ಯಾಕ್ಸ್ ಬಗ್ಗೆ ನಾವು ಅಮೆಂಡ್‌ಮೆಂಟ್ ಬಿಲ್ ತೆಗೆದುಕೊಂಡು ಬರುತ್ತೇವೆ ಎಂದು ಮಾನ್ಯ ಶಿವಕುಮಾರ್‌ರವರ ಹೇಳಿದರು. ಅದರ ಬಗ್ಗೆಯೂ ಗೊಂದಲವಿದೆ. ಯಾವುದರ ಬಗ್ಗೆಯೂ ಸರ್ಕಾರಕ್ಕೆ ಒಂದು ಸ್ಪಷ್ಟ ನಿಲುವಿಲ್ಲ. ಸೆಲ್ಫ್ ಅಸೆಸ್‌ಮೆಂಟ್ ಬಗ್ಗೆ ಬಿಲ್ ತರುತ್ತೇವೆ ಎಂದು ಹೇಳಿದ್ದರು. ಇವತ್ತು 31ನೇ ತಾರೀಖು, ಅಧಿವೇಶನದ ಕೊನೆಯ ದಿನ. ಆ ಬಿಲ್ಲೂ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದರೆ, ಮಾರ್ಚ್ 31ರೊಳಗೆ ಬಿಲ್ ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದರು. ಅದೂ ಬರಲಿಲ್ಲ. ಅದರಲ್ಲಿಯೂ ಗೊಂದಲ ನಿರ್ಮಾಣವಾಗಿದೆ. ಇದರ ಬಗ್ಗೆಯೂ ಸರ್ಕಾರದ ನಿಲುವು ಸ್ಪಷ್ಟವಿಲ್ಲ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಪ್ರವೇಶ ಪರೀಕ್ಷಾ ಪದ್ಧತಿಯ ಬಗ್ಗೆ ಚರ್ಚೆಯನ್ನು ಈ ಸದನದಲ್ಲಿ 10ನೇ ತಾರೀಖು ತೆಗೆದುಕೊಂಡೆವು. 10 ಮತ್ತು 11ನೇ ತಾರೀಖುಗಳಂದು ಚರ್ಚೆ ನಡೆಯಿತು. 12ನೇ ತಾರೀಖು ಸರ್ಕಾರ ಸರ್ವ ಪಕ್ಷಗಳ ಸಭೆಯನ್ನು ಕರೆದಾಗ ಅಲ್ಲಿ ಕೂಲಂಕುಷವಾಗಿ ಚರ್ಚೆ ಮಾಡಿ, ನಾವು ಕೆಲವು ಸಲಹೆಗಳನ್ನು ಕೊಟ್ಟಾಗ, ಸರ್ಕಾರದವರು, ನಾವು ಈ ವಿಚಾರದಲ್ಲಿ ಸದನದ ಮುಂದೆ ಸರ್ಕಾರದ ನಿಲುವನ್ನು ಪ್ರಕಟಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಮುಖ್ಯಮಂತ್ರಿಗಳ ಹತ್ತಿರ ಈ ವಿಚಾರವನ್ನು ಪ್ರಸ್ತಾಪ ಮಾಡಿ, ಇಲ್ಲಿ ಪ್ರಕಟಣೆ ಮಾಡಬಹುದು ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಹಾಗಾಗಲಿಲ್ಲ. ಈ ಮಧ್ಯೆ ರಜೆಗಳು ಬಂದವು. ಇದಕ್ಕಾಗಿ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿದರು. ಅದಕ್ಕೆ ಒಬ್ಬರು ಸಚಿವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದಾಗ ಅವರು ಹಿಂತೆಗೆದುಕೊಂಡರು. ನಂತರ ಮತ್ತೊಬ್ಬರನ್ನು ನೇಮಕ ಮಾಡಿದರು. ಅವರೂ ಸಹ ನಾವು ಮಾಡಲು ಆಗುವುದಿಲ್ಲ ಎಂದು ಹೇಳಿದರು. ಈಗ ಮೂರನೆಯವರು ಅಧ್ಯಕ್ಷರಾಗಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ದ್ವಂದ್ವ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದೆ. ಇದರಿಂದ, ರಾಜ್ಯದ ಪ್ರತಿಯೊಂದು ಮನೆಯಲ್ಲೂ ಆತಂಕ ಎದ್ದು ಕಾಣಿಸುತ್ತಿದೆ. ಪರೀಕ್ಷೆ ಮಾಡುತ್ತೇವೆ ಎಂದು ನೋಟಿಫಿಕೇಷನ್ ಮಾತ್ರ ಹಾಕಿದ್ದಾರೆ. ಆದರೆ, ಸರ್ಕಾರ ಇಷ್ಟು ಸೀಟನ್ನು ತೆಗೆದುಕೊಳ್ಳುತ್ತಿದೆ, ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಅರ್ಹತೆಯ ಆಧಾರದ ಮೇಲೆ ಕೊಡಲು ಸರ್ಕಾರ ಶೇಕಡಾ ಇಷ್ಟು ಸೀಟನ್ನು ತೆಗೆದುಕೊಳ್ಳುತ್ತದೆ, ಮೇನೇಜ್‌ಮೆಂಟಿಗೆ ಇಷ್ಟು ಸೀಟನ್ನು ಬಿಡುತ್ತಿದ್ದೇವೆ, ಎಷ್ಟು ಫೀಸನ್ನು ನಿಗದಿ ಮಾಡುತ್ತಿದ್ದೇವೆ ಈ ಯಾವುದೇ ವಿಚಾರಗಳನ್ನು ಸರ್ಕಾರ ಎಲ್ಲಿಯೂ ಹೇಳಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದವರು ಮತ್ತು ಗ್ರೂಪ್ ಎ ವಿದ್ಯಾರ್ಥಿಗಳ ಫೀಸ್ ಮತ್ತು ಸ್ಕಾಲರ್‌ಷಿಪ್ ಬಗ್ಗೆ ಯಾವ ನಿಲುವನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನೂ ಹೇಳಿಲ್ಲ. ಅಧಿವೇಶವ ಇವತ್ತು ಮುಗಿಯುತ್ತಿದೆ. ಆದರೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡ ನಿಯಮ 69 ಇನ್ನೂ ಜೀವಂತವಾಗಿದೆ, ಅದರ ಬಗ್ಗೆ ಸರ್ಕಾರ ಇನ್ನೂ ಸ್ಪಷ್ಟವಾದಂಥ ಉತ್ತರವನ್ನು ಕೊಟ್ಟಿಲ್ಲ. ಹೀಗಾಗಿ ಇವತ್ತು ಸಾರ್ವಜನಿಕರು ಬಹಳ ಕಂಗಾಲಾಗಿದ್ದಾರೆ. ಬೇರೆ ವಿಚಾರಗಳನ್ನು ಅಂದರೆ ಬಿಲ್‌ಗಳಂಥ ವಿಚಾರಗಳನ್ನು ಈಗಲ್ಲದಿದ್ದರೆ ಮುಂದಿನ ಸದನದಲ್ಲಿ ಇಟ್ಟುಕೊಳ್ಳಬಹುದು. ಆದರೆ ಈ ವಿಚಾರದಲ್ಲಿ ಸರ್ಕಾರ ಯಾವುದಾದರೂ ಒಂದು ನಿಲುವನ್ನು ಇವತ್ತು ಪ್ರಕಟ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ,

ವಿರೋಧ ಪಕ್ಷದವರಾದ ನಾವು ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. ಆದ್ದರಿಂದ ಇವತ್ತು ಸರ್ಕಾರ ಸೀಟ್ ಮ್ಯಾಟ್ರಿಕ್ಸ್ ಯಾವ ರೀತಿ ಇದೆ, ಎಷ್ಟು ಫೀಸನ್ನು ನಿಗದಿ ಮಾಡಲಾಗುತ್ತಿದೆ ಎನ್ನುವುದನ್ನು ಹೇಳಬೇಕು. ಇಲ್ಲದಿದ್ದರೆ, ಶೆಟ್ಟರ್‌ರವರು ಹೇಳಿದಂತೆ ಒಂದು ಶಾಸನವನ್ನಾದರೂ ಮಾಡಿ ವಿದ್ಯಾರ್ಥಿಗಳನ್ನು ರಕ್ಷಣೆ ಮಾಡುವಂಥಾದ್ದನ್ನು ಮಾಡಬೇಕು. ಆದರೆ ತಾವು ಆ ರೀತಿ ಯಾವುದೇ ಶಾಸನವನ್ನೂ ತರಲಿಲ್ಲ. ಆದ್ದರಿಂದಾಗಿ, ಇವತ್ತು ಗೊಂದಲವಾಗಿದೆ. ಆದ್ದರಿಂದ, ಇದಕ್ಕೆ ಒಂದು ಸ್ಪಷ್ಟವಾದಂಥ ನಿಲುವನ್ನು ಪ್ರಕಟ ಮಾಡಿ ನಂತರ ಬೇರೆ ಯಾವುದೇ ವಿಚಾರವನ್ನು ಚರ್ಚೆ ಮಾಡಬಹುದು. ಅದನ್ನು ಸರ್ಕಾರ ಮಾಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ):- ಸನ್ಮಾನ್ಯ ಅಧ್ಯಕ್ಷರೇ, ಕಳೆದ ತಿಂಗಳು 27ನೇ ತಾರೀಖು ಸದನ ಪ್ರಾರಂಭವಾಯಿತು. ಇವತ್ತು ಮಾರ್ಚ್ 31ನೇ ತಾರೀಖು. ಸುಮಾರು ಒಂದು ತಿಂಗಳು ಕಳೆದರೂ, ಈ ಸಿಇಟಿ ಗೊಂದಲಕ್ಕೆ ಸರ್ಕಾರ ಅಂತಿಮ ತೀರ್ಮಾನವನ್ನು ಹೇಳಲಿಲ್ಲ. ಈ ವಿಷಯ ಸದನದಲ್ಲಿ ಪದೇ ಪದೇ ಚರ್ಚೆಗೆ ಬಂದಿತು. ವಿದ್ಯಾರ್ಥಿಗಳ ಭವಿಷ್ಯ ಇವತ್ತು ತೂಗುಯ್ಯಾಲೆಯಲ್ಲಿದೆ. ಅವರು ಅನಿಶ್ಚಯದ ಮತ್ತು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಪ್ರೈವೇಟ್ ಕಾಲೇಜುಗಳವರು ಈಗಾಗಲೇ ಅನೌನ್ಸ್ ಮಾಡಿ ಒಂದು ಸೀಟಿಗೆ 5 ಲಕ್ಷ ರೂ. 7 ಲಕ್ಷ ರೂ, 9 ಲಕ್ಷ ರೂ. ಎಂದು ಹೇಳಿ ದುಡ್ಡನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಮಧ್ಯೆ ಡಾ: ಪರಮೇಶ್ವರ್‌ರವರು ನಮ್ಮನ್ನೆಲ್ಲಾ ಕರೆದು ಮಾತನಾಡಿದರು. ಅವತ್ತು ಮಾನ್ಯ ಚಂದ್ರೇಗೌಡರೂ ಸಭೆಯಲ್ಲಿದ್ದರು. ನಾವು ಇದನ್ನು ಸಚಿವ ಸಂಪುಟ ಸಭೆಯಲ್ಲಿ ತಂದು, ಒಂದೆರಡು ದಿವಸಗಳಲ್ಲೇ ಅಡ್ವೋಕೇಟ್ ಜನರಲ್‌ರವರ ಜೊತೆಯೂ ಮಾತನಾಡಿ, ನಮ್ಮ ತೀರ್ಮಾನವನ್ನು ಹೇಳುತ್ತೇವೆ, ನಿಮಗೆ ಅದರ ಬಗ್ಗೆ ಸಂಶಯ ಬೇಡ ಎಂದು ಹೇಳಿದ್ದರು. ಮಾನ್ಯ ಖರ್ಗೆಯವರು ಉಪ ಸಮಿತಿಯ ಅಧ್ಯಕ್ಷರಾಗಿರುತ್ತಾರೆ ಎಂದು ಹೇಳಿದರು. ಆದರೆ ಅವರು ನನಗೆ ಕೆಲಸವಿದೆ ಎಂದು ಹೇಳಿ ಅದನ್ನು ಒಪ್ಪಿಕೊಳ್ಳಲಿಲ್ಲ ಎಂದು ಪತ್ರಿಕೆಗಳಲ್ಲಿ ಓದಿದ್ದೇವೆ. ನಂತರ, ಮಾನ್ಯ ಚಂದ್ರೇಗೌಡರು ಅದರ ಜವಾಬ್ದಾರಿಯನ್ನು ವಹಿಸಿಕೊಂಡರು. ಸಭೆಯಲ್ಲಿ ಕಾಗೋಡು ತಿಮ್ಮಪ್ಪನವರೂ ಇದ್ದರು. ನಾವೆಲ್ಲಾ ಚರ್ಚೆ ಮಾಡಿ, ಇದಕ್ಕೆ ಒಂದು ಅಂತಿಮ ರೂಪ ಕೊಡುತ್ತೇವೆ ಎಂದು ಹೇಳಿದರು. ಇದುವರೆಗೂ ಅದು ಆಗಲಿಲ್ಲ. ಪತ್ರಿಕೆಗಳಲ್ಲಿ ನಾನಾ ರೀತಿಯ ಊಹಾಪೋಹಗಳು ಬರುತ್ತಿರುವುದನ್ನು ನೋಡುತ್ತಿದ್ದೇವೆ. ಪ್ರಪೋರ್ಷನ್ 50-50, 75-25, 85-15 ಎಂದು ಹೇಳುವಂಥಾದ್ದೆಲ್ಲಾ ಬರುತ್ತಿದೆ. ಇದಕ್ಕೆಲ್ಲಾ ಸರ್ಕಾರ ಒಂದು ತೆರೆ ಎಳೆಯಬೇಕು. ಅಧಿವೇಶನ ಇವತ್ತು ಕೊನೆಯ ದಿವಸವಾಗಿದೆ. ಇಲ್ಲಿಂದ ಇವತ್ತು ಒಂದು ಮೆಸೇಜ್ ಹೋಗದಿದ್ದರೆ, ವೃತ್ತಿಪರ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಭವಿಷ್ಯ ಏನಾಗಬೇಕು? Let the Government come out with the solutions to this problem. ಆದ್ದರಿಂದ ಸರ್ಕಾರ ಈ ಬಗ್ಗೆ ಒಂದು ಸ್ಪಷ್ಟನೆಯನ್ನು ಕೊಡಲಿ. ನಮ್ಮ ನಿಲುವು ಈ ರೀತಿ ಇದೆ, ಇನ್ನೂ ಒಂದು ವಾರವಾಗುತ್ತದೆ ಅಥವಾ ತಡವಾಗುತ್ತದೆ ಎಂದು ಹೇಳಲಿ. ಅವತ್ತು ನಾವು ಮಾರನೆಯ ದಿವಸವೇ ಹೇಳುತ್ತೇವೆ ಎಂದರು, ಒಂದು ವಾರದಲ್ಲಿ ಹೇಳುತ್ತೇವೆ ಎಂದರು. ಆದರೆ ಹದಿನೈದು ದಿವಸವಾಯಿತು. ಇವತ್ತಿಗೂ ಹೇಳುತ್ತಿಲ್ಲ.

ಇದಕ್ಕೆ ನಾವು ಏನೆಂದು ಹೇಳಬೇಕು. ಸರ್ಕಾರ ಈ ಬಗ್ಗೆ ಕೂಡಲೇ ಒಂದು ಸ್ಪಷ್ಟನೆಯನ್ನು ಕೊಡಬೇಕು, ನಮ್ಮ ತೀರ್ಮಾನ ಈ ರೀತಿ ಇದೆ ಎಂದು ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ತಿಳಿಸುವಂಥಾದ್ದು ಆಗಬೇಕು ಎಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

+ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಅಧ್ಯಕ್ಷರೆ, ಇದೇ ವಿಷಯದ ಬಗ್ಗೆ ಕಳೆದ ಒಂದು ತಿಂಗಳಿನಿಂದ ಮಧ್ಯೆ ಮಧ್ಯೆ ಚರ್ಚೆಗೆ ಬರುತ್ತಿದೆ. ಇವತ್ತು ಮಂತ್ರಿಗಳು ಉತ್ತರ ಕೊಡುವುದಕ್ಕೆ ಬಂದಿಲ್ಲ, ಸೋಮವಾರ ತೆಗೆದುಕೊಳ್ಳೋಣ ಎಂದು ತಾವು ಹೇಳಿದ್ದಿರಿ. ಸೋಮವಾರ ದಿವಸ ಮೊದಲ ಆದ್ಯತೆಯಾಗಿ ತೆಗೆದುಕೊಳ್ಳೋಣ ಎಂದು ಹೇಳಿದ್ದಿರಿ. ಇವತ್ತು ಕಲಾಪ ನಡೆಯುವ ಕೊನೆಯ ದಿವಸ ಎಂದು ತಾವು ಹೇಳಿದ್ದೀರಿ. ಆದರೆ ಇವತ್ತೂ ಸಹ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು:- ಶ್ರೀ ಚನ್ನಿಗಪ್ಪರವರೇ, ಮಂಗಳೂರಿಗೆ ಪ್ರೆಸಿಡೆಂಟ್ ಆಫ್ ಇಂಡಿಯಾ ಅವರು ಬಂದಿದ್ದರು. ಅದಕ್ಕೋಸ್ಕರ ಅಲ್ಲಿಗೆ ಮಿನಿಸ್ಟರ್ ಮತ್ತು ಗವರ್ನ್‌ರ್ ಹೋಗಲೇ ಬೇಕಿತ್ತು, ಅದಕ್ಕಾಗಿ ಅವರೆಲ್ಲಾ ಅಲ್ಲಿಗೆ ಹೋಗಿದ್ದಾರೆಯೇ ಹೊರತು ಉದ್ದೇಶಪೂರ್ವಕವಾಗಿ ಅವರೇನೂ ಆಬ್ಸೆಂಟ್ ಆಗಲಿಲ್ಲವಲ್ಲಾ.

ಶ್ರೀ ಸಿ. ಚನ್ನಿಗಪ್ಪ:- ಇದು ಬಹಳ ಮಹತ್ವವಾದ ವಿಚಾರವಾಗಿದೆ. ಇವತ್ತು ರಾಜ್ಯದಲ್ಲಿ ಪೇರೆಂಟ್ಸ್ ತಮ್ಮ ಮಕ್ಕಳನ್ನು ಯಾವ ಕಾಲೇಜಿಗೆ ಸೇರಿಸಬೇಕು, ಸರ್ಕಾರ ಸಿ.ಇ.ಟಿ. ಪರೀಕ್ಷೆಯನ್ನು ಮಾಡುತ್ತದೆಯೇ ಅಥವಾ ಇಲ್ಲವೇ, ಕೋರ್ಟ್ ಆದೇಶ ಏನಾಗಿದೆ ಇತ್ಯಾದಿ ಎಲ್ಲದರ ಬಗ್ಗೆ ಅವರಿಗೆ ಅನುಮಾನ ಇದೆ. ಇಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಮಂಗಳೂರಿನಲ್ಲಿ ಕೆಲಸ ಇದೆ ಎಂದು ಹೋದರೆ ಇದು ಎಷ್ಟರ ಮಟ್ಟಿಗೆ ಇವರಿಗೆ ರಾಜ್ಯದ ಬಡವರ, ಬಡ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇದೆ ಎನ್ನುವುದನ್ನು ತೋರಿಸುತ್ತದೆ. ಇದು ಸರಿಯಲ್ಲ. ಇವತ್ತು ಪರಿಶಿಷ್ಟ ಜಾತಿಯ ಬಂಧುಗಳ ಮಕ್ಕಳ, ವಿದ್ಯಾರ್ಥಿಗಳ ಗೋಳು ಹೇಳುವ ಹಾಗಿಲ್ಲ. 70 ಪರ್ಸೆಂಟ್, 60 ಪರ್ಸೆಂಟ್ ಬಂದಿದೆ, ಈ ಸಲ ಸಿಇಟಿ ಬರೆಯಬೇಕೆನ್ನುವಂಥ ಆಸೆಯಲ್ಲಿ ಇದ್ದಾರೆ. ಫೀಸ್ ನಿಗದಿ ಮಾಡಿಲ್ಲ, ಸೀಟ್‌ಗಳನ್ನು ನಿಗದಿ ಮಾಡಿಲ್ಲ. ಇಷ್ಟೆಲ್ಲಾ ತೊಂದರೆಗಳು ಇರುವಾಗ ಇಷ್ಟೊಂದು ಮೀನಾಮೇಷ ಎಣಿಸುವುದು ಅಷ್ಟು ಚೆನ್ನಾಗಿ ಸರ್ಕಾರಕ್ಕೆ ಕಾಣಿಸುವುದಿಲ್ಲ. ದಯಾ ಮಾಡಿ ಮಾನ್ಯ ಮಂತ್ರಿಗಳನ್ನು ಕರೆಸಿ ಕೂಡಲೇ ಉತ್ತರ ಕೊಡಬೇಕು. ಸರ್ಕಾರ ಇವುಗಳ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳದಿದ್ದರೆ, ಈ ಸರ್ಕಾರ ಸಾಹುಕಾರರ ಪರವಾಗಿ, ಮೆಡಿಕಲ್ ಕಾಲೇಜುಗಳ ಓನರ್ಸ್ ಪರವಾಗಿ ಇದ್ದಾರೆಂದು ನಾವಂತೂ ಹೇಳಬೇಕಾಗುತ್ತದೆ. ಅದು ಆಗಬಾರದು. ಆದರಿಂದ ದಯಮಾಡಿ ಕೂಡಲೇ ಮಂತ್ರಿಗಳನ್ನು ಕರೆಸಿ ಉತ್ತರವನ್ನು ಕೊಡಿಸುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಹೇಳಿದ್ದನ್ನೇ ಎಲ್ಲರೂ ಹೇಳುತ್ತಾ ಇದ್ದರೆ What is this? ಹೊಸ ಪಾಯಿಂಟ್ ಏನಾದರೂ ಇದ್ದರೆ ಹೇಳಿ. ಇವತ್ತು ಫೈನಲ್ ಆಗಿ ಉತ್ತರ ಕೊಡಿಸಬೇಕು, ಅಷ್ಟೆ ತಾನೆ I will do it. ಇವತ್ತು ಉತ್ತರ ಕೊಡಿಸುವುದಕ್ಕೆ ನಾನು ಏರ್ಪಾಟು ಮಾಡುತ್ತೇನೆ. ಡಾ: ಪರಮೇಶ್ವರ್ ಅವರು 3 ಗಂಟೆಗೆ ಬರುತ್ತೇನೆಂದು ಲೆಟರ್ ಬರೆದು ಕಳುಹಿಸಿ ಹೋಗಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, 3 ಗಂಟೆ ಎನ್ನುವ ನಾಟಕಗಳು ಕಳೆದ ಹಲವಾರು ದಿವಸಗಳಿಂದ ನಡೆಯುತ್ತಲೆ ಇವೆ. 3 ಗಂಟೆ ಆದಮೇಲೆ ಬೇರೆ ಯಾವುದಾದರೂ

ವಿಷಯವನ್ನು ಚರ್ಚೆಗೆ ತೆಗೆದುಕೊಂಡು ನಂತರ ಸದನವನ್ನು ಅಡ್ಜರ್ನ್ ಮಾಡಿ ನಮ್ಮನ್ನು ಕಳುಹಿಸಿಬಿಟ್ಟು ಇಡೀ ರಾಜ್ಯದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಏನೋ ಒಂದು ಕಪ್ಪು ಗೆರೆ ಎಳೆಯುವಂಥ ಪ್ರಯತ್ನವನ್ನು ಮ್ಯಾನೇಜ್‌ಮೆಂಟ್‌ನವರ ಜೊತೆಗೆ ಸೇರಿಕೊಂಡು ಇವರು ಮಾಡುತ್ತಿದ್ದಾರೆನೋ ಎಂಬ ಅನುಮಾನ ಬರುತ್ತಿದೆ.

ಅಧ್ಯಕ್ಷರು:- ಗೌಡರೇ, ಅಕಸ್ಮಾತ್ ಡಾ: ಪರಮೇಶ್ವರ್ ಅವರು ಇಲ್ಲದಿದ್ದರೆ ಬೇರೆ ಮಿನಿಸ್ಟರ್‌ಗಳು ಉತ್ತರ ಕೊಡುತ್ತಾರೆ. ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಸದಾನಂದ ಗೌಡರೇ, you should take back that word. How can he accuse the Government?

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ:- ಸ್ವಯಂಘೋಷಿತ ಆಸ್ತಿ ತೆರಿಗೆ ಬಗ್ಗೆ ಒಂದು ಅಮೆಂಡ್‌ಮೆಂಟ್ ತರುತ್ತೇನೆಂದು ಹೇಳಿ ಅದನ್ನು ನಿಮ್ಮಿಂದ ತರಲಿಕ್ಕೆ ಆಗಲಿಲ್ಲ.......... ನಿಮ್ಮ ಪೋರ್ಟ್‌ಫೋಲಿಯೋದ ಬಗ್ಗೆ ಬಂದಾಗ ನೀವು ಮಾತನಾಡಿ.

(ಗೊಂದಲ)

ಶ್ರೀ ಡಿ.ಬಿ. ಸದಾನಂದಗೌಡ:- ನಿಮ್ಮ ಇಲಾಖೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕೆ ಆಗದಿರುವವರು ಆ ಇಲಾಖೆಯ ಬಗ್ಗೆ ತಾವು ಏಕೆ ತಲೆ ಹಾಕುತ್ತಿದ್ದೀರಿ? ಸ್ವಯಂಘೋಷಿತ ಆಸ್ತಿ ತೆರಿಗೆ ಬಗ್ಗೆ ಅಮೆಂಡ್‌ಮೆಂಟ್ ತರುತ್ತೇನೆಂದು ಹೇಳಿದ್ದಿರಲ್ಲಾ, ಆ ನಿಮ್ಮ ಅಮೆಂಡ್‌ಮೆಂಟ್ ಎಲ್ಲಿದೆ? ಅದನ್ನು ತರಬೇಕಿತ್ತಲ್ಲವೇ? ಅದನ್ನು ಯಾವಾಗ ಮಾಡುತ್ತೀರಿ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:- ನಾವು ಏನು ತರಬೇಕು, ಮಾಡಬೇಕು ಎನ್ನುವುದು ನಮಗೆ ಗೊತ್ತಿದೆ. ನಿಮ್ಮ ಕೈಯಿಂದ ನಾವು ಬುದ್ಧಿವಾದ ಹೇಳಿಸಿಕೊಳ್ಳಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಡಾ: ಪರಮೇಶ್ವರ್ ಬರಲಿ ಅಥವಾ ಬರದೇ ಇರಲಿ ಸಂಜೆಯೊಳಗೆ ನಾನು ಸರ್ಕಾರದ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಯಾವಾಗಲೂ ಸರ್ಕಾರದ ಕಡೆಯಿಂದ ಇದೇ ರೀತಿ ನೆಪ ಹೇಳಿಕೊಂಡು ಮುಂದೂಡುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ನಾವು ನಿಂತುಕೊಂಡರೆ ತಮಗೆ ಬೇಜಾರು ಆಗುತ್ತದೆ.

ಅಧ್ಯಕ್ಷರು:- ಬೇಜಾರಿನ ಸಂಗತಿಯಲ್ಲ. ಒಂದೇ ವಿಷಯವನ್ನು 12 ಜನ ಹೇಳಿದರೆ ಹೇಗೆ? ಒಂದೇ ಪಾರ್ಟಿಯವರು ಎಲ್ಲರೂ ಮಾತನಾಡಿದರೆ ಹೇಗೆ?... ಉತ್ತರವನ್ನು ನಾನು ಕೊಡಿಸುತ್ತೇನೆ.

(ಗೊಂದಲ)

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ನಾವು ಈ ಸದನವನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇವೋ ಅಷ್ಟು ಗಂಭೀರವಾಗಿ ಸರ್ಕಾರ ತೆಗೆದುಕೊಳ್ಳುತ್ತದೆಯೆ? 21ನೇ ದಿವಸ 10ನೇ ತಾರೀಖು ಈ ಚರ್ಚೆ ಇಲ್ಲಿ ಪ್ರಾರಂಭ ಆಗಿತ್ತು. ಆವತ್ತಿನಿಂದ ಒಂದಲ್ಲ ಒಂದು ಕಾರಣಗಳನ್ನು ಕೊಟ್ಟುಕೊಂಡು ಮುಂದೂಡುತ್ತಲೇ ಸರ್ಕಾರ

ಬರುತ್ತಿದೆ. ಇವತ್ತು ಫೀಸ್ ಸ್ಟ್ರಕ್ಚರನ್ನು ಆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಘೋಷಿಸುತ್ತಿದ್ದಾರೆ. ಅಡ್ಮಿಷನ್‌ನ್ನು ಏಪ್ರಿಲ್ ಮೂರನೇ ತಾರೀಖಿನಿಂದ ಪ್ರೋಸಸ್ ಸ್ಟಾರ್ಟ್ ಮಾಡಿಬಿಡುತ್ತೇವೆಂದು ಘೋಷಿಸಿಬಿಟ್ಟಿದ್ದಾರೆ. ನೀವೇನಾದರೂ ಅನೌನ್ಸ್ ಮಾಡದಿದ್ದರೆ we will go ahead ಎಂದು ಸರ್ಕಾರಕ್ಕೆ ಇವತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಅಲ್ಟಿಮೇಟಂ ಕೊಡುತ್ತಿದ್ದಾರೆ. ಹಾಗಾದರೆ ಇಂಥ ಒಂದು ಪರಿಸ್ಥಿತಿಯಲ್ಲಿ ನಮ್ಮದೇನೂ ಜವಾಬ್ದಾರಿ ಇಲ್ಲವೇ? ನಾವು 10ನೇ ತಾರೀಖು ಪ್ರಸ್ತಾಪ ಮಾಡಿದ ಮೇಲೆ 31ನೇ ತಾರೀಖು ಎಲ್ಲಾ ಮುಗಿಯಿತು ಎಂದು ಕಡತ ತೆಗೆದುಕೊಂಡು ಮನೆಗೆ ಹೋಗುವುದೆ ನಮ್ಮ ಜವಾಬ್ದಾರಿಯೇ? ಅದಕ್ಕೋಸ್ಕರ ನಾವು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹ ಮಾಡುತ್ತಿರುವುದೇನೆಂದರೆ, ಇನ್ನು ನಾವು ತಡೆಯುವುದಕ್ಕೆ ಆಗುವುದಿಲ್ಲ. ದಯವಿಟ್ಟು ಮಕ್ಕಳ ಬಗ್ಗೆ ಅನುಕೂಲವಾಗುವ ಹಾಗೆ ಏನೂ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಉತ್ತರವನ್ನು ಹೇಳಬೇಕು.

+**ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ):-** ಮಾನ್ಯ ಅಧ್ಯಕ್ಷರೆ, ಒಂದು ಕಡೆಯಲ್ಲಿ ಸರ್ಕಾರ ಸದನ ಮತ್ತು ವಿದ್ಯಾರ್ಥಿಗಳೊಂದಿಗೆ ಕಣ್ಣು ಮುಚ್ಚಾಲೆ ಆಡುತ್ತಿದೆ ಎಂದು ನನಗನ್ನಿಸುತ್ತಿದೆ. ಈಗಾಗಲೇ ಸದಸ್ಯರೆಲ್ಲರೂ ಹೇಳಿದ ಹಾಗೆ ಈ ವಿಷಯ 10ನೇ ತಾರೀಖು ಪ್ರಾರಂಭ ವಾಗಿರುವಂಥದ್ದು. ಅವತ್ತು ಮಾನ್ಯ ಸಚಿವರಾದ ಡಾ: ಪರಮೇಶ್ವರ್ ಅವರು ಏನು ಹೇಳಿದರೆಂದರೆ ಸಚಿವಸಂಪುಟದ ಮುಂದೆ ತೀರ್ಮಾನ ತೆಗೆದುಕೊಂಡು ಸೋಮವಾರ ಸದನಕ್ಕೆ ಉತ್ತರವನ್ನು ಹೇಳುತ್ತೇನೆಂದು ಹೇಳಿದ್ದರು. ಇದು ಶುಕ್ರವಾರ ಆಗಿರುವಂಥದ್ದು. ಸೋಮವಾರ ಪುನಃ ನಾವು ಪತ್ರಿಕೆಯಲ್ಲಿ ಓದಿದ್ದು ಏನೆಂದರೆ-ಸಚಿವಸಂಪುಟದ ಉಪಸಮಿತಿಯಾಗಿದೆ, ಅದಕ್ಕೆ ಅಧ್ಯಕ್ಷರನ್ನು ಮಾಡಿ ಬದಲಾವಣೆ ಆದುದನ್ನೆಲ್ಲಾ ನೋಡಿದ ಮೇಲೆ ಇವತ್ತಿನವರೆಗೆ ಏನೂ ಉತ್ತರ ಇಲ್ಲ. ಅದರ ಮಧ್ಯೆ 'ತಕ್ಷಣದಲ್ಲಿ ತೀರ್ಮಾನ ತೆಗೆದುಕೊಂಡು ಹೇಳುತ್ತೇವೆಂದು' ಇನ್ನೊಂದು ಸಲ ಸಚಿವರು ಬಂದು ಹೇಳಿದರು. ಈಗ ಅನೇಕ ಕಲಾಪಗಳು ಇವೆ ಎಂದು ಮಾನ್ಯ ಅಧ್ಯಕ್ಷರಾದ ತಾವು ಹೇಳುತ್ತಿದ್ದೀರಿ. ಎಲ್ಲಾ ಕಲಾಪಗಳಿಗಿಂತ ಮುಖ್ಯವಾದಂಥದ್ದು ಇದು ಆಗಿರುತ್ತದೆ. ಇವತ್ತು ಇದಕ್ಕೆ ತೀರ್ಮಾನ ಆಗದೆ ಬೇರೆ ಯಾವುದನ್ನೂ ಚರ್ಚೆಗೆ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ ಎಂದು ಕಾಣುತ್ತದೆ. ಏಕೆಂದರೆ ಇದರಲ್ಲಿ ಮಕ್ಕಳ ಭವಿಷ್ಯ ಅಡಗಿದೆ. ಈಗ ಬರೀ ಪಿ.ಯು.ಸಿ. ಪರೀಕ್ಷೆ ಪ್ರಾರಂಭವಾಗುತ್ತಿದೆ. ಅವರು ಮುಂದೆ ಸರ್ಕಾರ ನಡೆಸುವಂಥ ಸಿ.ಇ.ಟಿ. ಪರೀಕ್ಷೆಗೆ ಕುಳಿತುಕೊಳ್ಳಬೇಕೇ ಅಥವಾ ಎಲ್ಲಾ ಕಾಲೇಜುಗಳಿಗೆ ಅರ್ಜಿಗಳನ್ನು ಹಾಕಬೇಕೇ ಎನ್ನುವುದರ ಬಗ್ಗೆ ತೀರ್ಮಾನ ಆಗಿಲ್ಲ. ಒಂದು ವೇಳೆ ಅವರಿಗೆ ಸರ್ಕಾರ ಮಾಡುವಂಥ ಸಿ.ಇ.ಟಿ. ಪರೀಕ್ಷೆಗೆ ಮಾತ್ರ ಅರ್ಜಿಯನ್ನು ಹಾಕುವುದಾದರೆ, ಬೇರೆ ಕಾಲೇಜುಗಳನ್ನು ಅರ್ಜಿಯನ್ನು ಹಾಕುವುದು ಬೇಡವೆಂದಾದರೆ, ಸರ್ಕಾರ ಅದಕ್ಕಾದರೂ ಹೇಳಿಕೆಯನ್ನು ಕೊಡಲಿ. ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಏನು ಪರೀಕ್ಷೆಯನ್ನು ಮಾಡುತ್ತಾರೆ ಅದಕ್ಕೆ ಅಪಿಯರ್ ಆಗುವುದು ಬೇಡವೆಂದಾದರೂ ಹೇಳಿಕೆಯನ್ನು ಕೊಡಲಿ. ಇಲ್ಲದಿದ್ದರೆ ಅಲ್ಲಿಯೂ ಪರೀಕ್ಷೆಗೆ ಕುಳಿತುಕೊಳ್ಳುವುದ ಕ್ಕಾಗುವುದಿಲ್ಲ, ಸಾಧ್ಯವಿಲ್ಲ ಅಲ್ಲಿ ಕುಳಿತುಕೊಳ್ಳಲಿಕ್ಕೆ ಏಕೆಂದರೆ ಆ ಫೀಸ್‌ನ್ನು ಕೊಡುವುದಕ್ಕೆ ಆಗುವುದಿಲ್ಲ. ಸರ್ಕಾರ ನಡೆಸುವ ಸಿ.ಇ.ಟಿ. ಪರೀಕ್ಷೆ ಕೇವಲ ಸರ್ಕಾರಿ ಮತ್ತು ಏಡೆಡ್ ಕಾಲೇಜುಗಳಿಗೆ ಮಾತ್ರವೇ ಎಂಬುದನ್ನು ಕ್ಲಾರಿಫೈ ಮಾಡಬೇಕು. ಮಾನ್ಯ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಅವರು - 'ನೀವು ಸರ್ಕಾರಕ್ಕೆ ಹೇಳಬೇಕಾಗಿಲ್ಲ, ಸರ್ಕಾರಕ್ಕೆ ಆದೇಶ ಮಾಡಬೇಕಾಗಿಲ್ಲ' ಎಂದು ಹೇಳಿದರು.

ಶ್ರೀ ಡಿ.ಕೆ. ಶಿವಕುಮಾರ್:- ಮ್ಯಾನೇಜ್‌ಮೆಂಟ್ ಜೊತೆ ಸೇರಿ ಶಾಮೀಲಾಗಿದ್ದೀರಿ ಎಂದು ಹೇಳಿದರು. ಅದಕ್ಕೆ ನಾನು ಅವರಿಗೆ ಹೇಳಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಆ ವಿಷಯದ ಗಂಭೀರತೆ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚು ಕಳಕಳಿ ನಮಗೆ ಇದೆ. ಆ ಕಾರಣಕ್ಕಾಗಿಯೇ ಎಲ್ಲಾ ಮ್ಯಾನೇಜ್‌ಮೆಂಟ್‌ನವರನ್ನು ಕರೆಸಿ ಚರ್ಚೆ ಮಾಡಿದ್ದೇವೆ. ಆ ಕಾರಣಕ್ಕಾಗಿಯೇ ವಿರೋಧ ಪಕ್ಷದ ಮುಖಂಡರನ್ನೆಲ್ಲಾ ಕರೆಸಿ ಮಾತನಾಡಿದ್ದೇವೆ. ಆ ಕಾರಣಕ್ಕಾಗಿಯೇ ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದೇವೆ. ಅದೇ ಕಾರಣಕ್ಕಾಗಿಯೇ ವಿಶೇಷವಾದಂಥ ಎರಡು ಸಮಿತಿಗಳನ್ನು ಮಾಡಿದ್ದು, ಆ ಸಮಿತಿಗಳ ವರದಿಗಳೂ ಕೂಡ ಬಂದಿವೆ. ಅಡಿಶನಲ್ ಚೀಫ್ ಸೆಕ್ರಟರಿ ನೇತೃತ್ವದಲ್ಲಿ ಒಂದು ಸಮಿತಿ ಮತ್ತು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ನೇತೃತ್ವದಲ್ಲಿ ಒಂದು ಸಮಿತಿ ಮಾಡಿದ್ದು ಅವರಿಂದಲೂ ವರದಿ ಬಂದಿದೆ. ಈಗ 2-3 ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅವರು ಹಿರಿಯ ವಕೀಲರೂ ಕೂಡ ಹೌದು. ಸಾಮಾನ್ಯ ಪರೀಕ್ಷೆಯ ವಿಚಾರದಲ್ಲಿ ಯಾವ ಗೊಂದಲವೂ ಇಲ್ಲ. ಇದನ್ನು ನಾನು ಸ್ಪಷ್ಟಪಡಿಸುವುದಕ್ಕೆ ಈ ಸಭೆಯಲ್ಲಿ ಮತ್ತೆ ಮತ್ತೆ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಮೇ 30 ಮತ್ತು 31ರ ದಿನಾಂಕಗಳನ್ನು ನಿಗದಿ ಮಾಡಿದ್ದು ಅದರಂತೆ ಆ ದಿನಗಳಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಯುತ್ತದೆ. ಹಾಗೆ ನಡೆದಂಥ ಪಕ್ಷದಲ್ಲಿ, ... ದಯವಿಟ್ಟು ಕುಳಿತುಕೊಳ್ಳಿ ಸ್ವಾಮಿ, ನೀವು ಹೇಳಿದ ಹಾಗೆ ಕೇಳಿದ್ದೇವೆ. I can understand, Please hear me.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಒಂದೇ ಪರೀಕ್ಷೆಗೆ ಕುಳಿತುಕೊಂಡರೆ ಸಾಕೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಮೊದಲು ಮಂತ್ರಿಗಳು ಉತ್ತರ ಹೇಳಲಿ. ಆ ಮೇಲೆ ನೀವು ಮಾತನಾಡಿ. You please talk afterwards. Let him complete.

(ಗೊಂದಲ)

Sri D.B. Chandre Gowda:- You can't go on shouting. This is first. Therefore, ಸಾಮಾನ್ಯ ಪರೀಕ್ಷೆ ವಿಚಾರದಲ್ಲಿ ಯಾವ ಗೊಂದಲಕ್ಕೂ ಎಡೆ ಇಲ್ಲ. ಸರ್ಕಾರ ತೀರ್ಮಾನ ಮಾಡಿದೆ. ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಮಾಡುತ್ತೇವೆ. ಆ ಪರೀಕ್ಷೆಯ ಪ್ರಕಾರವೇ ಈ ಒಂದು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿರತಕ್ಕಂಥ ಮಕ್ಕಳನ್ನು ಯಾವ ಯಾವ ಕಾಲೇಜಿನಲ್ಲಿ ಸೇರಿಸಬೇಕೆನ್ನುವುದಕ್ಕೆ ಏನೇನು ಪ್ರಯತ್ನವನ್ನು ಮಾಡಬೇಕೋ ಅದನ್ನಿಲ್ಲಿ ಮಾಡುತ್ತೇವೆ. ನೀವು ಏಕೆ ಮರುಪರಿಶೀಲನಾ ಅರ್ಜಿಯನ್ನು ಹಾಕಲಿಲ್ಲ ಎಂದು ಕೇಳಿದರು. As a senior Advocate. ಅವರಿಗೆ ಗೊತ್ತಿದೆ. 11 ಜನ ನ್ಯಾಯಮೂರ್ತಿಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಕುಳಿತು ಮಾಡಿರತಕ್ಕಂಥ ತೀರ್ಮಾನಕ್ಕೆ ಮರುಪರಿಶೀಲನಾ ಅರ್ಜಿಯನ್ನು ಹಾಕುವಾಗ ಹೇಗೆ ಹಾಕಬೇಕು, ಯಾವ ರೀತಿಯಲ್ಲಿ ಅದನ್ನು ನಾವು ಡ್ರಾಫ್ಟ್ ಮಾಡಬೇಕು, ಏನು ಅಭಿಪ್ರಾಯಗಳನ್ನು ಪಡೆಯಬೇಕು ಎನ್ನತಕ್ಕಂಥದ್ದನ್ನು ಎಲ್ಲಾ ರೀತಿಯಾದಂಥ ಅಭಿಪ್ರಾಯವನ್ನು

ಪಡೆದು ಅದು ಪ್ರಯೋಜನ ಇಲ್ಲ ಎನ್ನತಕ್ಕಂಥ ಕಾರಣಕ್ಕಾಗಿ ಹಾಕಿಲ್ಲವೇ ಹೊರತು ಮರುಪರಿಶೀಲನಾ ಅರ್ಜಿ ಹಾಕಿದ್ದೇವೆಂದು ಹೇಳಿ ನಾವು ಬೆನ್ನು ತಟ್ಟಿಸಿಕೊಳ್ಳಬಹುದು. ಆ ಬೆನ್ನು ತಟ್ಟಿಸಿಕೊಳ್ಳುವ ಕೆಲಸ ನಮಗೆ ಬೇಕಾಗಿಲ್ಲ. ಎರಡನೆಯದಾಗಿ, ಹೊಸ ಶಾಸನ ರಚನೆ ಮಾಡಬೇಕಾಗಿತ್ತು ಎಂದು ಹೇಳಿದರು. There cannot be a law as against the judgement of the Supreme Court. This is known to everyone of us. What is that law? Have they proposed any law? What is that law we can do? There cannot be any law passed by the legislature as against the judgement of the Supreme Court. Again I would make myself very clear. ಆದ್ದರಿಂದ ಇಲ್ಲಿ ನೀವು ಮ್ಯಾನೇಜ್‌ಮೆಂಟ್ ಪರವಾಗಿ ಇದ್ದೀರಿ ಎಂದು ಹೇಳಿದರು. ಮಗು ಇಲ್ಲಿ ಹುಟ್ಟಿಲ್ಲ. ಗಂಡೋ ಹೆಣ್ಣೋ ಗೊತ್ತಿಲ್ಲ. ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಬೇಕು, ನಾವೇನೂ ಇಲ್ಲಿ ಗಂಡು ಮಕ್ಕಳು ಎಂದು ಅಂಗಿ ಹೊಲಿಸಿಕೊಂಡು ಹೋಗಿದ್ದೇವೆಯೇ? ಏನೂ ಇಲ್ಲವಲ್ಲಾ. ಹೆಣ್ಣು ಮಗಳು ಎಂದು ಹೇಳಿ ಲಂಗ ಹೊಲಿಸಿ ಇಟ್ಟಿಲ್ಲವಲ್ಲಾ, ಅದು ಎರಡನ್ನೂ ನಾವು ಮಾಡಿಲ್ಲ. ಆದ್ದರಿಂದ ಯಾವ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುತ್ತದೋ ಆ ನಿರ್ಣಯವನ್ನು ತೆಗೆದುಕೊಳ್ಳುತ್ತದೆ.

11.30 ಎ.ಎಂ.

ಊಹೆ ಮಾಡಿ, ಪ್ರಚಾರಪ್ರಿಯತೆಯಿಂದ ಮ್ಯಾನೇಜ್‌ಮೆಂಟ್ ಜೊತೆ ಇದ್ದೀರೆಂದು ಹೇಳಿದರೆ, ಯಾವ್ಯಾವ ಸರ್ಕಾರಗಳು ಏನೇನು ಮಾಡಿದ್ದಾರೆ ಎಲ್ಲಾ ವರದಿಗಳನ್ನೂ ತರಿಸಿದ್ದೇವೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪರವಾಗಿ ಯಾರು ಅರ್ಜಿ ಹಾಕಿದ್ದಾರೆ, ಕೇರಳದವರು, ಆಂಧ್ರ ಪ್ರದೇಶದವರು, ತಮಿಳುನಾಡಿನವರು ಏನು ಮಾಡಿದರು ಎಲ್ಲವನ್ನೂ ತರಿಸಿದ್ದೇವೆ. ಇದು ಈ ರಾಜ್ಯಕ್ಕೆ ಸೀಮಿತವಾದ ತೀರ್ಮಾನವಲ್ಲ. ಕೇಂದ್ರ ಸರ್ಕಾರವೇಕೆ ಕಣ್ಣುಮುಚ್ಚಿ ಕುಳಿತಿದೆ? They could have passed a legislation. Parliament is competent to pass a legislation. ಮೀಸಲಾತಿ ಬಿಲ್ ಬಂದಾಗ ಸಂವಿಧಾನವನ್ನು ತಿದ್ದುಪಡಿ ಮಾಡಿದರು. ಕೇಂದ್ರ ಸರ್ಕಾರಕ್ಕೆ ತನ್ನ ಜವಾಬ್ದಾರಿ ಇಲ್ಲವೇ?

(ಗೊಂದಲ)

ಅಧ್ಯಕ್ಷರು:- ಅವರು ಉತ್ತರ ಮುಗಿಸಲಿ.

(ಗೊಂದಲ)

ಅಧ್ಯಕ್ಷರು:- ಈ ರೀತಿ ಅಡ್ಡಿಪಡಿಸುವುದು. I don't like this. ನೀವೆಲ್ಲಾ ಮಾತನಾಡುವಾಗ ಅವರು ಸುಮ್ಮನೆ ಇದ್ದರು. ಶೆಟ್ಟರ್ ಮಾತನಾಡುವವರೆಗೂ ಅವರು ಸುಮ್ಮನಿದ್ದರು. ಅವರು ಮಾತನಾಡುವಾಗ ನೀವೇಕೆ ಅಡ್ಡಿ ಮಾಡುತ್ತೀರಿ? No; I don't like this. ನೀವು ಮಾತನಾಡುವಾಗ ಅವರು ಸುಮ್ಮನಿರಲಿಲ್ಲವೇ? ಅವರು ಪೂರಾ ಮುಗಿಸುವವರೆಗೂ ಸುಮ್ಮನಿರಿ. ಆಮೇಲೆ ಮಾತನಾಡಿ. ಏಕೆ ಮಧ್ಯೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಸ್ಟೇಟ್ ಸಬ್ಜೆಕ್ಟ್ ಎನ್ನುವುದೂ ಗೊತ್ತಿದೆ, ಎಜುಕೇಷನ್ ಕನ್‌ಕರೆಂಟ್ ಲಿಸ್ಟ್‌ನಲ್ಲಿದೆ ಎನ್ನುವುದೂ ಗೊತ್ತಿದೆ, ಯಾವ ಷೆಡ್ಯೂಲ್‌ನಲ್ಲಿದೆ ಎಂದೂ ಗೊತ್ತಿದೆ

ರಾಮದಾಸ್‌ರವರೇ, ನಾನು ತೀರಾ ಅಷ್ಟು ತಿಳಿಯದೇ ಇರುವ ಕಾನೂನು ಮಂತ್ರಿಯಲ್ಲ? I know what law the legislation, the Parliament can enact. Under the circumstances, as against the judgement of the Supreme Court. ನೀವು ಮಾಡಲಿಲ್ಲವೇ?

(ಗೊಂದಲ)

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಪೂರಾ ಮುಗಿಸಲಿ. ಅವರು ಮುಗಿಸುವವರೆಗೆ ತಡೆಯಿರಿ. ಆಮೇಲೆ ಮಾತನಾಡಿ. I will allow you.

Sri D.B. Chandre Gowda:- Under the Circumstances, as against the judgement of the Supreme Court, ನೀವು ಮಾಡಲಿಲ್ಲವೇ?

ಅಧ್ಯಕ್ಷರು:- ಮಂತ್ರಿಗಳು ಮಾತನಾಡುವಾಗ 6-7 ಜನ ಒಂದೇ ಸಲ ಮಾತನಾಡಿದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ:- ಆತುರದಲ್ಲಿ ಅಡಿಗೆ ಮಾಡುವುದಕ್ಕೆ ಹೋಗಿ ಏನೂ ತಿಳಿಯದೆ, ಊಟ ಮಾಡಲಾರದ ಅಡಿಗೆ ಮಾಡಿಡುವುದಕ್ಕಿಂತ, ಬಹಳ ತಾಳ್ಮೆಯಿಂದ ಕುಳಿತು ಆಲೋಚಿಸಿ, ಸಮಾಲೋಚನೆಗಳನ್ನು ಮಾಡಿ, ನಮಗಿರುವ ಇತಿಮಿತಿಗಳನ್ನು ಅರ್ಥ ಮಾಡಿಕೊಂಡು ಯಾವ ರೀತಿ ಶಾಸನಗಳನ್ನು ರಚಿಸಬೇಕು, ಅಗತ್ಯವಿದೆಯೇ ಮತ್ತು ನಮಗೆ ಸಾಧ್ಯವೇ? Whether we have a legislative competence is also the first question which we have to answer. ಆದುದರಿಂದ, ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ತೆಗೆದುಕೊಳ್ಳಬೇಕಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಂಡಿದ್ದೇವೆ. ಕ್ಯಾಬಿನೆಟ್ ಕೂಡ ನಾಳೆ ಸೇರುತ್ತಿದೆ. ಆ ಕ್ಯಾಬಿನೆಟ್‌ನಲ್ಲಿ ಸಲಹೆಗಳು ಬಂದಿರುವುದು ಎಲ್ಲಾ ಪ್ರತಿಪಕ್ಷದ ಸಲಹೆಗಳು, ಸಬ್-ಕಮಿಟಿ ಸಲಹೆಗಳು ಮತ್ತು ಮಂತ್ರಿ ಮಂಡಲದ ಉಪಸಮಿತಿಯ ಸಲಹೆಗಳು ಇದ್ದು, ಇವೆಲ್ಲವನ್ನೂ ಪರಿಶೀಲಿಸಿ ಯಾವುದಾದರೊಂದು ನಿರ್ಧಾರಕ್ಕೆ ಬರುತ್ತೇವೆ. ಪ್ರಿ-ಯೂನಿವರ್ಸಿಟಿ ಪರೀಕ್ಷೆ 3ನೇ ತಾರೀಖಿನಿಂದ ಪ್ರಾರಂಭವಾಗುತ್ತಿದೆ. ಆ ಪರೀಕ್ಷೆ ರಿಸಲ್ಟ್ ಬರಬೇಕು. ಸಿಇಟಿ ಆಗಬೇಕು. ಆಮೇಲೆ ಸೀಟ್ ಮ್ಯಾಟ್ರಿಕ್ಸ್ ಫಿಕ್ಸ್ ಮಾಡಬೇಕು. ನಂತರ, ಎಷ್ಟು ಫೀ ಫಿಕ್ಸ್ ಆಗಬೇಕೆಂದು ನಿರ್ಧರಿಸಬೇಕು. ಕೂಸು ಹುಟ್ಟಿಲ್ಲ, ಪ್ರಾರಂಭವಾಗಿಲ್ಲ, ಆಗಲೇ ಏನೋ ತಲೆ ಮೇಲೆ ಬಿದ್ದು ಹೋಗಿದೆ ಎಂದು ಹೇಳಿದರೆ, ಏನೂ ತಲೆ ಮೇಲೆ ಬಿದ್ದು ಹೋಗಿಲ್ಲ. ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸುವ ಶಕ್ತಿ, ಸಾಮರ್ಥ್ಯ ಈ ಸರ್ಕಾರಕ್ಕಿದೆ. ಬುದ್ಧಿವಂತಿಕೆ ಇದೆ. ಮಾಡುತ್ತೇವೆ. ಈ ಸರ್ಕಾರ ಮಕ್ಕಳ ಪರವಾಗಿರುತ್ತದೆನ್ನುವುದನ್ನು ಈ ಸದನದಲ್ಲಿ ಹೇಳುತ್ತಾ, ಸಂಬಂಧಪಟ್ಟ ಮಂತ್ರಿಗಳು ಬಂದು, ಅವರು ಇನ್ನೂ ಹೆಚ್ಚಿಗೆ ಹೇಳುವುದಿದ್ದರೆ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಇದೇ ರೀತಿ ಮಾಡುತ್ತಿದ್ದಾರೆ. ಸದನದಲ್ಲಿ ಚರ್ಚೆಯಾಗುತ್ತಿದೆ, ಇದೇ ರೀತಿಯ ಧಾಟಿಯಲ್ಲಿ ಅವರು ಮಾತನಾಡುವುದು. ಏನೂ ಆಕಾಶ ಬೀಳಲಿಲ್ಲ, ಏನೂ ಆಗಲಿಲ್ಲ ಎನ್ನುವ ಧಾಟಿ ಏನಿದೆ ಇದು ಸರಿಯಲ್ಲ. ಒಂದು ಕಡೆ ಶಿಕ್ಷಣ ಇವತ್ತು ನಮ್ಮ ರಾಜ್ಯದ ಸಬ್ಜೆಕ್ಟ್ ಎಂದು ಹೇಳುತ್ತಾರೆ. ಅದನ್ನು ಬಿಟ್ಟು ಕೇಂದ್ರ ಸರ್ಕಾರ ಮಾಡಬೇಕಾಗಿತ್ತು ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರದ ಮೇಲೆ ಹಾಕುವುದು. ಹಾಗಾದರೆ,

ನೀವೇನು ಮಾಡುತ್ತೀರಿ? ಕೇಂದ್ರ ಸರ್ಕಾರವೇನಾದರೂ ಮಾಡಲಿಕ್ಕೆ ಸಾಧ್ಯವಿದ್ದರೆ, ಡೆಲಿಗೇಷನ್ ತೆಗೆದುಕೊಂಡು ಹೋಗಬೇಕೆಂದು ಅವತ್ತೇ ಆಗಿತ್ತಲ್ಲವೇ? ನೀವು ಪ್ರಯತ್ನ ಮಾಡಿದಿರಾ?

ಶ್ರೀ ಡಿ.ಬಿ. ಚಂದ್ರೇಗೌಡ:- ವಿರೋಧ ಪಕ್ಷದ ನಾಯಕರೆ, ಆ ಕಾರಣಕ್ಕಾಗೇ ಹೇಳಿದೆ, ಕೇಂದ್ರ ಸರ್ಕಾರವೇ ಕರೆಯಬಹುದಿತ್ತಲ್ಲವೇ? ಇದು ರಾಷ್ಟ್ರೀಯ ಸಮಸ್ಯೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಮ್ಮ ಜವಾಬ್ದಾರಿ ಸಂಪೂರ್ಣ ಇದೆ, ಮಾಡುತ್ತೇವೆ. ನಿಮ್ಮ ಜವಾಬ್ದಾರಿ ನಿಭಾಯಿಸಿಲ್ಲವೆಂದು ಅವರಿಗೆ ಹೇಳಿ. ನಿಮಗೂ ಜವಾಬ್ದಾರಿ ಇದೆ ಎಂದು ನೆನಪು ಮಾಡಿದೆ ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್:- ಜನತೆಯ ಕಾಳಜಿ ಬಗ್ಗೆ, ರಾಜ್ಯದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ನೋಡಬೇಕಾಗುತ್ತದೆ. ಅಮೆಂಡ್‌ಮೆಂಟ್ ಮಾಡಲಿಕ್ಕೆ ನಿಮ್ಮ ಜವಾಬ್ದಾರಿ ಇದೆ. ಜವಾಬ್ದಾರಿ ನಿಭಾಯಿಸಲೇನು ಮಾಡಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ:- ಸಿಇಟಿ ತಂದ ಕೀರ್ತಿ ನಮ್ಮದು. ಮಾನ್ಯ ವೀರಪ್ಪ ಮೊಯ್ಲಿಯವರ ಕಾಲದಲ್ಲಿ ಕಾಂಗ್ರೆಸ್ ಸರ್ಕಾರವೇ ಸಿಇಟಿ ತಂದಿದ್ದು. We will not forget that.

ಶ್ರೀ ಜಗದೀಶ್ ಶೆಟ್ಟರ್:- ಶಾಸನ ಮಾಡಬಹುದೆಂದು ನಾವು ಹೇಳಿದ್ದೆವು. ಶಾಸನ ಮಾಡಲಿಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದೀರಿ. ಹಾಗಾದರೆ, ಪ್ರಯತ್ನ ಏಕೆ ಮಾಡಬಾರದು? ಷಾಬಾನುಕೇಸ್‌ನಲ್ಲಿ ಏನಾಯಿತು? ಸುಪ್ರೀಂ ಕೋರ್ಟ್ ಡಿಸಿಷನ್ ಆದ ಮೇಲೆ Maintenance of divorced women ಏನಾಯಿತು? ಅದು ಛೇಂಜ್ ಆಗಲಿಲ್ಲವೇ.

ಶ್ರೀ ಡಿ.ಬಿ. ಚಂದ್ರೇಗೌಡ:- ಸುಪ್ರೀಂ ಕೋರ್ಟಿನಲ್ಲಿ ಆದ ತೀರ್ಮಾನವನ್ನು ವಿರುದ್ಧವಾಗಿ ಒಂದು ಶಾಸನ ಸಭೆ ಶಾಸನವನ್ನು ರಚನೆ ಮಾಡುವುದಕ್ಕಾಗುವುದಿಲ್ಲ. Therefore, the Parliament should take notice of that. The Central Government should take serious notice of such questions and enact a law. That is all my submission.

ಶ್ರೀ ಜಗದೀಶ್ ಶೆಟ್ಟರ್:- ನೀವು ಶಾಸನವನ್ನು ತರಲು ಪ್ರಯತ್ನಿಸಲಿಲ್ಲ. ಮೇಲ್ಮನವಿ ಬಗ್ಗೆ ಲೀಗಲ್ ಎಕ್ಸ್‌ಪರ್ಟ್ ಹೇಳಿದ್ದಾರೆಂದು ಹೇಳಿದರು. ರಿವಿಜನ್ ಪಿಟಿಷನ್ ಫೈಲ್ ಮಾಡಲು ಪ್ರಯತ್ನವಾಗಲಿಲ್ಲ. ಇವತ್ತಿನವರೆಗೆ ನಿಮ್ಮ ಸ್ಟ್ಯಾಂಡ್ ಏನೂ? ಇದೇ ಧಾಟಿ ನಿಮ್ಮದು. ಹಾಗಾದರೆ, ಸುಪ್ರೀಂಕೋರ್ಟಿನ ಆ ತೀರ್ಮಾನದ ವ್ಯತಿರಿಕ್ತವಾಗಿ ತೀರ್ಪು ತೆಗೆದುಕೊಳ್ಳಲು ಸಾಧ್ಯವಿದೆಯೇ ಹೇಗೆ? ಅದು ಆಗುವುದಿಲ್ಲವೋ, ಹೇಗೆ? ಹಾಗಾದರೆ, ಏನು ಮಾಡುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ:- ಸಾಧ್ಯವಿಲ್ಲ. ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ವಿರುದ್ಧ ತೀರ್ಮಾನ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್:- ತೀರ್ಪಿನ ವ್ಯತಿರಿಕ್ತವಾಗಿ ಆಗದಿದ್ದರೆ, ನಿಮ್ಮ ಸರ್ಕಾರದ ಸ್ಟ್ಯಾಂಡ್ ಏನು?

ಅಧ್ಯಕ್ಷರು:- ಅವರು ತೀರ್ಪಿನ ಪ್ರಕಾರ ಮಾಡಬೇಕಷ್ಟೆ.

ಶ್ರೀ ಜಗದೀಶ್ ಶೆಟ್ಟರ್:- ನಾಳೆ ಕ್ಯಾಬಿನೆಟ್ ಮೀಟಿಂಗ್ ಇದೆ ಎಂದು ಹೇಳುತ್ತೀರಿ. 10ನೇ ತಾರೀಖಿನಿಂದ ಎಷ್ಟು ಕ್ಯಾಬಿನೆಟ್ ಆಯಿತು? ಅಲ್ಲಿ ನೀವು ಡಿಸಿಷನ್ ತೆಗೆದುಕೊಳ್ಳ

ಲಾಗಲಿಲ್ಲವೇ? ಈಗಾಗಲೇ ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಗಡುವು ಕೊಟ್ಟಿದ್ದಾರೆ. ಏಪ್ರಿಲ್ 3ನೇ ತಾರೀಖಿನಿಂದ ಅಡ್ಮಿಷನ್ ಪ್ರೋಸೆಸ್ ಪ್ರಾರಂಭವಾಗುತ್ತದೆಂದು ಹೇಳಿದ್ದಾರೆ. ನೀವು, ಇನ್ನೂ ಬೇಕಾದಷ್ಟು ಟೈಂ ಇದೆ, ಎಗ್ಸಾಂ ಆಗಿಲ್ಲ, ಕೂಸು ಹುಟ್ಟಲಿಲ್ಲ ಕುಲಾವಿಯನ್ನು ಹೇಗೆ ಹೊಲಿಸುವುದು ಎಂದು ಹೇಳುತ್ತಾ ಕುಳಿತಿದ್ದರೆ, ಇನ್ನೊಂದು ತಿಂಗಳಲ್ಲಿ ಅವಧಿ ಮುಗಿಯುತ್ತದೆ. ನಿಮ್ಮ ಸ್ಟ್ಯಾಂಡ್ ಏನು? ಸರ್ಕಾರದ ಸ್ಟ್ಯಾಂಡ್ ಕ್ಲಿಯರ್ ಆಗಿಲ್ಲ. ನಿಮಗೆ ಆಗುತ್ತದೆಯೋ, ಇಲ್ಲವೋ? ಮೇ 30, 31 ರಂದು ಸಿಇಟಿ ಪರೀಕ್ಷೆ ನಡೆಯುತ್ತದೆಂದು ಹೇಳಿದ್ದೀರಿ. ಎಷ್ಟೆಷ್ಟು ಕೋಟಾ ಫಿಕ್ಸ್ ಮಾಡಿದ್ದೀರಿ? ನೀವು ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಎಷ್ಟು ಕೋಟಾ ಫಿಕ್ಸ್ ಮಾಡಿದ್ದೀರಿ? ಸರ್ಕಾರದ ಮೆರಿಟ್ ಸೀಟ್‌ಗೆ ಎಷ್ಟು ಕೋಟಾ ಫಿಕ್ಸ್ ಮಾಡಿದ್ದೀರಿ? ಅನೌನ್ಸ್ ಮಾಡಿದ್ದೀರಿ. ಎಷ್ಟು ಸೀಟುಗಳನ್ನು ಹಂಚಿಕೆ ಮಾಡಿದ್ದೀರಿ? ಅನೌನ್ಸ್ ಆಗಿಲ್ಲ. ಹಾಗಾದರೆ, ಅನೌನ್ಸ್ ಮಾಡಿ. ಇವತ್ತು 31, ಅಧಿವೇಶನ ಮುಗಿಯುತ್ತಿದೆ. ಮುಂದೆ ಸದನ 3 ತಿಂಗಳು ಇಲ್ಲ. ಹೊಸ ಶಾಸನ ಮಾಡಲು ಸಮಯವಿಲ್ಲ.

Sri Mallikarjun Kharge:- What is your stand? ಎಷ್ಟು ಪರ್ಸೆಂಟೇಜ್ ಆಗಬೇಕೆಂದು ಹೇಳುತ್ತೀರಿ? ಒಂದು ಸಲಹೆಯನ್ನಾದರೂ ಕೊಡಿ ನೋಡೋಣ. ಸುಪ್ರೀಂ ಕೋರ್ಟ್‌ನ ತೀರ್ಮಾನ ಬಂದಿದೆ. ನಮ್ಮ ನಿಲುವು ಹೀಗಿದೆ. ನಾವು ಈ ನಿಲುವಿನ ಪ್ರಕಾರ ಹೋಗುತ್ತೇವೆ. ನೀವು ಇದಕ್ಕೆ ಸಹಾಯ ಮಾಡಿ, ನೀವು, ನಾವು ಯೋಚಿಸೋಣವೆಂದು ಹೇಳೋಣ.

ಶ್ರೀ ಜಗದೀಶ್ ಶೆಟ್ಟರ್:- ಆಲ್ ಇಂಡಿಯಾ ಪಾರ್ಟಿ ಮೀಟಿಂಗ್‌ನಲ್ಲಿ ನಮ್ಮ ಪ್ರಪೋಸಲ್ ನಾವು ಕೊಟ್ಟಿದ್ದೇವೆ. ಮಾನ್ಯ ಸುರೇಶ್‌ಕುಮಾರ್, ಹಾಗೂ ಮಾನ್ಯ ರಾಮದಾಸ್‌ರವರು ಬಂದಿದ್ದರು, ಅವರು ಅಲ್ಲಿ ಪ್ರಪೋಸಲ್ ಕೊಟ್ಟಿದ್ದಾರೆ. ನಮ್ಮ ಸ್ಟ್ಯಾಂಡ್ ಕ್ಲಿಯರ್ ಇದೆ. ಸರ್ಕಾರದ ತನ್ನ ಸ್ಟ್ಯಾಂಡ್ ಅನ್ನು ಕ್ಲಿಯರ್ ಮಾಡಬೇಕು. ಇಲ್ಲದಿದ್ದರೆ, ಗೊಂದಲದ ಗೂಡಾಗಿದೆ. ಗೊಂದಲ ನಿರ್ಮಾಣವಾಗಿದೆ. ಇದು ಮುಂದುವರಿಯುತ್ತಿದೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಚಂದ್ರೇಗೌಡರು ಈ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಕಳಕಳಿ ಇದೆ, ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಬೇಕು, ನಿಮ್ಮಷ್ಟೇ ನಮಗೂ ಕಳಕಳಿ ಇದೆ ಎಂದು ಹೇಳಿದ್ದಾರೆ. ನಿಮ್ಮ ಕೃತಿಯಲ್ಲಿ, ವಿದ್ಯಾರ್ಥಿಗಳ ಪರವಾದ ಒಂದು ನಿಲುವನ್ನು ಯಾವುದೇ ಸಂದರ್ಭದಲ್ಲಿ ತೋರಿಸದಿರುವುದೇ ನಮಗೆಲ್ಲಾ ಆತಂಕವಾಗಿದೆ. ಈಗ ಸುಪ್ರೀಂ ಕೋರ್ಟಿನ ತೀರ್ಪನ್ನು 31ನೇ ಅಕ್ಟೋಬರ್‌ನಂದು ಕೊಟ್ಟರು. ಇಲ್ಲಿಗೆ ಸುಮಾರು 5 ತಿಂಗಳಾಯಿತು. 5 ತಿಂಗಳ ಮೊದಲು ಇವರು, ಮೊನ್ನೆ 10ನೇ ತಾರೀಖು ಕರೆದ ಸಭೆ ಬದಲಾಗಿ 4 ತಿಂಗಳ ಹಿಂದೆ ವಿರೋಧ ಪಕ್ಷದ ಸಭೆ ಕರೆದು, ಏನು ತೀರ್ಮಾನ ಮಾಡಿದ್ದಾರೆ? ಅದು ಮಾಡಲಿಲ್ಲ. ಸಿಇಟಿ ಕರೆಯುತ್ತೇವೆ, ಮಾಡೇ ಮಾಡುತ್ತೇವೆಂದು ಹೇಳಿದರು. ಸಿಇಟಿ ಮಾಡಬಹುದು. ಸಿಇಟಿ ಮಾಡಿದ್ದೊಂದೇ ಸಾಧನೆಯಲ್ಲ. ಸಿಇಟಿ ಮಾಡಿ ನೂರಕ್ಕೆ ನೂರು ಮ್ಯಾನೇಜ್‌ಮೆಂಟ್ ಪರವಾಗಿ ಸಿಇಟಿಯನ್ನು ನೀವೇ ಮಾಡುವುದಾದರೆ ಅಂಥ ಸೀಟು ಏಕೆ ಬೇಕು? ಸಿಇಟಿಯಲ್ಲಿ ಎಷ್ಟು ಪರ್ಸೆಂಟೇಜ್ ಅನ್ನು ಬಡ ವಿದ್ಯಾರ್ಥಿಗಳಿಗೆ, ಎಷ್ಟು ಪರ್ಸೆಂಟೇಜ್ ಅನ್ನು ಮ್ಯಾನೇಜ್‌ಮೆಂಟ್‌ಗೆ, ಎಷ್ಟು ಪರ್ಸೆಂಟೇಜ್ ಅನ್ನು ಯಾವ್ಯಾವ ಕೋರ್ಸ್‌ಗಳಿಗೆ, ಎಷ್ಟು ಫೀಸ್ ಅನ್ನು ಯಾವ್ಯಾವ ವಿದ್ಯಾರ್ಥಿಗಳಿಗೆ ಕೊಡಬೇಕೆನ್ನುವುದೇ ಈಗಿರುವ ವಿಚಾರ.

ಯಾವ ಸುಪ್ರೀಂಕೋರ್ಟಿನ ತೀರ್ಮಾನದಲ್ಲಿ ಇಷ್ಟೇ ನಿಗದಿಪಡಿಸಬೇಕೆಂದು ಅವರು ಹೇಳಿಲ್ಲ. ಮ್ಯಾನೇಜ್‌ಮೆಂಟ್‌ಗೆ ಇಷ್ಟೇ ಸೀಟು ಕೊಡಬೇಕೆಂದು ಹೇಳಿಲ್ಲ. ಇವತ್ತು ಸರ್ಕಾರ ಏಡೆಡ್ ಇನ್‌ಸ್ಟಿಟ್ಯೂಷನ್ಸ್‌ಗೆ ಎಷ್ಟು ಫಿಕ್ಸ್ ಮಾಡಬಹುದು? ಅನ್-ಏಡೆಡ್ ಇನ್‌ಸ್ಟಿಟ್ಯೂಷನ್ಸ್‌ಗೆ ಯಾವ ರೀತಿ ಅಡ್ಮಿಷನ್ ಮಾಡಬಹುದು? ಎಷ್ಟು ಫೀ ನಿಗದಿಪಡಿಸಬಹುದೆನ್ನುವ ಅಧಿಕಾರ ಸರ್ಕಾರಕ್ಕಿದೆ. ಆ ದಿಕ್ಕಿನಲ್ಲಿ ಇನ್ನೂ ನಿಖರವಾದ ತೀರ್ಮಾನ ತೆಗೆದುಕೊಂಡಿಲ್ಲ. ಇವತ್ತು ನೀವು ಹೇಳಬಹುದು. ಸುಪ್ರೀಂ ಕೋರ್ಟ್ ಯಾವುದೇ ತೀರ್ಪು ಕೊಟ್ಟರೂ ನಾವು ಎಷ್ಟು ಪರ್ಸೆಂಟೇಜ್ ಮ್ಯಾನೇಜ್‌ಮೆಂಟ್‌ಗೆ ಕೊಡುತ್ತೇವೆ, ಎಷ್ಟು ಪರ್ಸೆಂಟೇಜ್ ಸರ್ಕಾರ ಇಟ್ಟುಕೊಳ್ಳುತ್ತದೆ, ಎಷ್ಟು ಫೀಸ್ ನಿಗದಿಪಡಿಸುತ್ತದೆಂದು ಹೇಳಿ ಇದುವರೆಗೂ ಏಕೆ ನೀವು ಮುಂದೆ ಬಂದಿಲ್ಲ? ಅಂದರೆ ಮೊನ್ನೆ ನಾನು ಹೇಳಿದೆ, ಪ್ರೈವೇಟ್ ಇನ್‌ಸ್ಟಿಟ್ಯೂಷನ್ ಅಸೋಸಿಯೇಷನ್‌ನವರು ಅವರದೇ ಆದ ಮ್ಯಾಟ್ರಿಕ್ಸ್ ಇಷ್ಯೂ ಮಾಡಿದ್ದಾರೆ. ಅವರ ಪಕ್ಷದ ಮುಖಂಡರು. ಅವರ ಪಕ್ಷದ ಮುಖಂಡರು, ಪ್ರೈವೇಟ್ ಮ್ಯಾನೇಜ್‌ಮೆಂಟ್ ಅಸೋಷಿಯೇಷನ್ ಪ್ರೆಸಿಡೆಂಟ್ ಎಂದು ಹೇಳಿ ಅವರದೇ ಆದ ಮ್ಯಾಟ್ರಿಕ್ಸ್ ಇಷ್ಯೂ ಮಾಡಿದ್ದಾರೆ. ಅದನ್ನು ಇಲ್ಲೀಗಲ್ ಎಂದು ನೀವು ಕರೆಯಿರಿ ಎಂದು ಹೇಳಿದರೆ ಸರ್ಕಾರ ಹೇಳುವುದಕ್ಕೆ ತಯಾರಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳವರು ಹಾಕಿಕೊಂಡಿರುವ ಮ್ಯಾಟ್ರಿಕ್ಸ್ ಇಲ್ಲೀಗಲ್. ನಮ್ಮ ಸರ್ಕಾರ ಪ್ರತ್ಯೇಕ ಮ್ಯಾಟ್ರಿಕ್ಸ್ ಹೊರಡಿಸುತ್ತೇವೆ ಎನ್ನುವ ವಿಚಾರ ಇನ್ನೂ ಎತ್ತಿಲ್ಲ. ಇದರ ಅರ್ಥ ಏನೆಂದರೆ ಮ್ಯಾನೇಜ್‌ಮೆಂಟ್‌ನವರಿಗೆ ಸರ್ಕಾರ ಹೆದರಿಕೊಂಡಿದೆ ಎನ್ನುವುದೇ ನಮ್ಮ ಭಯ. ಆದರೆ ಇವತ್ತೂ ಹೇಳಬಹುದು. ನೀವು ಸುಪ್ರೀಂ ಕೋರ್ಟಿನವರ ವಿರುದ್ಧ ಹೋಗಬೇಕಾಗಿಲ್ಲ. ಸುಪ್ರೀಂ ಕೋರ್ಟಿನವರು ಇಂತಿಷ್ಟೇ ಪರ್ಸೆಂಟೇಜ್ ಎಂದಾಗಲಿ ಇಂತಿಷ್ಟೇ ಫೀ ಎಂದಾಗಲಿ ಫಿಕ್ಸ್ ಮಾಡಿ ಎಂದು ಹೇಳಿಲ್ಲ. ನೀವು ಇವತ್ತೇ ನಿಗದಿ ಮಾಡಬೇಕಾಗುತ್ತದೆ. ಏಕೆಂದರೆ, ಈಗಾಗಲೇ 5-6 ತಿಂಗಳಾಗಿವೆ. ಕೇಂದ್ರ ಸರ್ಕಾರ ಮಾಡಬಹುದಾಗಿತ್ತು ಎಂದು ಹೇಳಿರಿ, ಇದು ಕೇಂದ್ರ ಸರ್ಕಾರದ ಕೆಲಸವಲ್ಲ. ಸುಪ್ರೀಂ ಕೋರ್ಟಿನಲ್ಲಿ ಇದ್ದಂಥ ಕೇಸ್ ಯಾವುದು? T.M.A. Pai Vs State of Karantaka ಟಿಎಂಎ ಪೈ ರವರು, ನಮ್ಮ ರಾಜ್ಯ ಸರ್ಕಾರದಲ್ಲಿದ್ದಂಥ ಸಿಇಟಿ ಪದ್ಧತಿ, 1997 ರೂಲ್ಸ್‌ನಲ್ಲಿ ಏನಿದೆ, ಇದರಲ್ಲಿ ಬಹಳ ತಪ್ಪುಗಳಾಗಿವೆ ಎಂದು they have questioned it and Supreme Court has arrived at that this is not a proper system ಅವರು ಹೇಳಿದ್ದಾರೆ, ಅದನ್ನು ಡಿಫೆಂಡ್ ಮಾಡತಕ್ಕಂಥ ಕರ್ತವ್ಯ ನಮ್ಮ ಸರ್ಕಾರದ್ದು ಅಲ್ಲವೇ? ನಮ್ಮ ಸರ್ಕಾರ ಈ ಒಂದು ಸಿಸ್ಟಂ ಏನು ತಂದಿದ್ದೇವೆ, this was a model system in the entire Country. It was their duty to defend that system. ಅದನ್ನು ಬಿಟ್ಟು ಇವತ್ತು ಇದನ್ನು ಕೇಂದ್ರ ಸರ್ಕಾರ ಮಾಡಬಹುದಾಗಿತ್ತು ಎಂದರೆ, ನೀವು ಕೇಂದ್ರ ಸರ್ಕಾರಕ್ಕೆ ಹೋಗದೇ ಅವರೇ ಮಾಡುತ್ತಾರಾ? ನೀವು ಏನಾದರೂ ವಿರೋಧ ಪಕ್ಷದವರನ್ನು ಕೇಂದ್ರ ಸರ್ಕಾರಕ್ಕೆ ಕರೆದುಕೊಂಡು ಹೋಗಿ Constitutional ಅಮೆಂಡ್‌ಮೆಂಟ್ ತರಬೇಕೆಂದು ಹೇಳಿ ನಾವು ಎಲ್ಲರೂ ನಿಮ್ಮ ಜೊತೆಯಲ್ಲಿರುತ್ತೇವೆ. ಇದನ್ನು ಯಾವುದೇ ಮಾಡದೇ ನೀವು 5 ತಿಂಗಳುಗಳ ಕಾಲ ಕಾಲಹರಣ ಮಾಡಿದ್ದೀರಿ, ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿದ್ದೀರಿ, ಇವತ್ತು ನೀವು ಇದರ ಬಗ್ಗೆ ಹೇಳದೇ ಇದ್ದರೆ ನಾವಂತೂ ಈ ಸದನ ನಡೆಯುವುದಕ್ಕೆ ಬಿಡುವುದಿಲ್ಲ, ಏಕೆಂದರೆ ಇದು ಬಹಳ ಸೂಕ್ಷ್ಮವಾದ ವಿಚಾರ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ನಾನು ಅಷ್ಟೊತ್ತಿನಿಂದ ತಮ್ಮಲ್ಲಿ ಕೇಳುತ್ತಿದ್ದೇನೆ ನನಗೆ ಅವಕಾಶ ಕೊಡಿ,..

ಅಧ್ಯಕ್ಷರು:- ನೋಡಿ ಒಂದು ಪಾರ್ಟಿಯಿಂದ ಸೇಮ್ ಮ್ಯಾಟರ್ ಅನ್ನು ಆರಾರು ಜನ ಮಾತನಾಡುವುದಕ್ಕೆ ಆಗುತ್ತದೆಯೆ? ನೀವೇ ಹೇಳಿ, suppose if you were in the Chair ನೀವು ಏನು ಮಾಡುತ್ತಿದ್ದೀರಿ? ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಎ. ರಾಮದಾಸ್:- ತಾವು ಇಷ್ಟೊಂದು ಬೇಸರ ಮಾಡಿಕೊಂಡರೆ ಹೇಗೆ? ನನ್ನ ವಿಚಾರಗಳನ್ನು ಹೇಳುವುದು ಬೇಡವೆ?

ಅಧ್ಯಕ್ಷರು:- ಇವತ್ತು ಇಷ್ಟೊಂದು ಸಬ್ಜೆಕ್ಟ್ ಇದೆ ರಾತ್ರಿ 10 ಗಂಟೆಯಾದರೂ ಮುಗಿಲಾರದಷ್ಟು ವಿಷಯಗಳಿವೆ. ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎ. ರಾಮದಾಸ್:- ಅನಾವಶ್ಯಕವಾಗಿ ನಾನು ಮಾತನಾಡುತ್ತೇನೆಂದು ತಮಗೆ ಅನ್ನಿಸಿದರೆ ನಾನು ಕುಳಿತುಬಿಡುತ್ತೇನೆ.

ಅಧ್ಯಕ್ಷರು:- ಅನಾವಶ್ಯಕ ಪ್ರಶ್ನೆಯಲ್ಲ, ಒಂದೇ ಸಬ್ಜೆಕ್ಟ್‌ನ್ನು ಒಂದೇ ಪಾರ್ಟಿಯವರು ಎಷ್ಟು ಜನ ಮಾತನಾಡುವುದು ಎಂಬುದನ್ನು ನೀವು ತೀರ್ಮಾನ ಮಾಡಿಕೊಳ್ಳಿ. ನಾವಲ್ಲ. ಹೇಳಿದ್ದೇ ಹೇಳುವುದು. ನೀವು ಮಾತನಾಡುವುದಕ್ಕೂ ಒಂದು ಲಿಮಿಟ್ಸ್ ಇದೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ):- ಹೇಳಿದ್ದನ್ನೇ ಹೇಳುವುದಿಲ್ಲ. ಅವರೇನು ವಿಚಾರ ಕೊಟ್ಟರೋ ಅದರ ಮೇಲೆ ಮಾತನಾಡುತ್ತೇನೆ. ಮೇ 30ನೇ ತಾರೀಖು ಸಿಇಟಿ ಮಾಡುತ್ತೇವೆಂದು ಹೇಳಿದಿರಿ ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ ಸಿಇಟಿ ಮಾಡುವಂಥದ್ದು ಎಷ್ಟು ವಿದ್ಯಾರ್ಥಿಗಳಿಗೆ? ಸರಕಾರದ ಕಾಲೇಜುಗಳಲ್ಲಿರುವ 450 ವಿದ್ಯಾರ್ಥಿಗಳಿಗಾಗಿಯೇ? ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿರುವ 1850 ವಿದ್ಯಾರ್ಥಿಗಳಿಗಾಗಿಯೇ? ರಿಲಿಜಸ್, ಮೈನಾರಿಟಿಸ್ ಇನ್ಸ್‌ಟಿಟ್ಯೂಷನ್‌ನಲ್ಲಿರುವ 410 ವಿದ್ಯಾರ್ಥಿಗಳಿಗಾಗಿಯೇ? ಲಿಂಗ್‌ವಿಸ್ಟಿಕ್ ಮೈನಾರಿಟಿ ಯಲ್ಲಿರುವಂಥ 900 ವಿದ್ಯಾರ್ಥಿಗಳು, ಈ ರೀತಿಯಲ್ಲಿ ಒಟ್ಟು ಎಲ್ಲಾ ವಿದ್ಯಾರ್ಥಿಗಳಿಗಾಗಿಯೇ ಸಿಇಟಿಯನ್ನು ಮಾಡುತ್ತಿದ್ದೇವೆ ಎನ್ನುವಂಥ ಮ್ಯಾಟ್ರಿಕ್ಸ್ ಅನ್ನು ಇವತ್ತು ಏಕೆ ಅನೌನ್ಸ್ ಮಾಡಿಲ್ಲ? ಇವತ್ತು ತಾವು ಕೇಂದ್ರ ಸರ್ಕಾರ ಏಕೆ ಮಾಡಬಾರದು ಎಂದು ಹೇಳಿದಿರಿ, ನನ್ನ ನಾಲೇಡ್ಜ್‌ಗೆ ಬಂದ ಹಾಗೆ, ಎಜ್ಯುಕೇಷನ್ ಒಂದು ಸ್ಟೇಟ್ ಸಬ್ಜೆಕ್ಟ್ ಆಗಿರುವ ದೃಷ್ಟಿಯಿಂದ ಈ ವ್ಯವಸ್ಥೆಯ ಒಳಗಡೆ, ನ್ಯಾಯಾಲಯದಲ್ಲಿ ನಮ್ಮ ರಾಜ್ಯ ಸರ್ಕಾರ ವರ್ಸ್‌ಸ್ ಒಂದು ಸಂಸ್ಥೆಯ ಮಧ್ಯದಲ್ಲಿ ಇದ್ದುದ್ದರಿಂದ, ಇದಕ್ಕೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿಗೆ ಒಂದು ಅಫಿಡೆವಿಟ್ ಅನ್ನು ಹಾಕಿದೆ. ಸರ್ಕಾರದ ಸ್ಟ್ಯಾಂಡ್ ಏನೆಂದು ಹೇಳಿದೆ. ಅದರ ಪ್ರಕಾರದಲ್ಲಿ ಮಾಡಿಕೊಳ್ಳಬೇಕು. ತಾವು ಬೇಜಾರು ಮಾಡಿಕೊಳ್ಳಬೇಡಿ, ಇವತ್ತು ನಾವು ಏಕೆ ಕೇಳುತ್ತೇವೆಂದರೆ, ಈ ಸದನದಲ್ಲಿ ಸುಪ್ರೀಂ ಕೋರ್ಟಿನ ವಿರುದ್ಧ ಅಲ್ಲ, ಸುಪ್ರೀಂ ಕೋರ್ಟ್ ಕೊಟ್ಟಂಥ ಆದೇಶವನ್ನು ಪಾಲನೆ ಮಾಡುವುದಕೋಸ್ಕರವಾಗಿ ರಾಜ್ಯ ಸರ್ಕಾರ ಒಂದು enactment ಮಾಡಬೇಕಾಗಿತ್ತು. ಒಂದು ಬಿಲ್ ಅನ್ನು ತರಬೇಕಾಗಿತ್ತು. ಇವತ್ತು ಸಂಜೆ 5ಕ್ಕೆ ಸದನ ಮುಗಿದು ಹೋದರೆ, ಇನ್ನು ಯಾವಾಗ ಬಿಲ್ ತರೋಣ, ಅದು ನಮ್ಮ ಕಾಳಜಿ. ಸದನ ನಡೆಯಬಾರದೆಂದಲ್ಲ. ಇವತ್ತಾದರೂ ಕೂಡ ಅಂಥ ಬಿಲ್ ಅನ್ನು ತರುತ್ತಾರೆ ಎನ್ನುವ ನಿರೀಕ್ಷಣೆಯನ್ನು ನಾವೆಲ್ಲಾ ಮಾಡಿದ್ದೆವು, ಬಿಲ್ ಬರಲಿಲ್ಲ ಎನ್ನುವ ಕಾರಣಕ್ಕಾಗಿ ನಾವು ಇಲ್ಲಿ ಎದ್ದಿದ್ದೇವೆಯೇ ವಿನಾ ಬೇರೆ ಏನೂ ಇಲ್ಲ.

ಸರ್ಕಾರ ಅಂಥ ಒಂದು enactment ಮಾಡಿ, ನಾನು ಆಗಲೇ ಹೇಳಿದಂತೆ enactment ಮಾಡಿದ್ದನ್ನು Constitution Schedule 9ರ ಕೆಳಗಡೆ ತೆಗೆದುಕೊಂಡು ಬಂದರೆ, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಕ್ಕೆ ಸಾಧ್ಯವಿಲ್ಲ. ಆ ಕೆಲಸ ರಾಜ್ಯ ಸರ್ಕಾರ ಮಾಡಬೇಕಾಗಿತ್ತು. Fee structure ಗೆ ಸಂಬಂಧಪಟ್ಟ ಹಾಗೆ ಎರಡು ಮೀಟಿಂಗ್‌ಗಳು ಆಗಿವೆ, ಅದು ಏನಾಗಿದೆ ಎಂಬುದನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ.

+ಡಾ: ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, ಸೀಟಿ ವಿಷಯದಲ್ಲಿ ಸನ್ಮಾನ್ಯ ವಿರೋಧ ಪಕ್ಷದ ಧುರೀಣರು ನಿರ್ದಿಷ್ಟವಾಗಿ ಮಾನ್ಯ ಮುಖ್ಯ ಮಂತ್ರಿಗಳಿಂದ ಸ್ಪಷ್ಟೀಕರಣ ಕೇಳಿದರು ಅದಕ್ಕೆ ಅವರು ಉತ್ತರಿಸಿದರು. ಇದರಲ್ಲಿ ಕ್ಲಾರಿಟಿ ಇಲ್ಲದೇ ಇರುವುದರಿಂದ ಸ್ವಲ್ಪ ವಿಳಂಬವಾಗಿದೆ ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಮತ್ತೊಂದು ಪ್ರಶ್ನೆ ಉದ್ಭವವಾಯಿತು, ಎಲ್ಲಾ ವಿರೋಧ ಪಕ್ಷದ ಧುರೀಣರು ಸಭೆಯನ್ನು ಕರೆದಾಗ, ಬಿಜೆಪಿ ಕಡೆಯಿಂದ ನಾವು ಒಂದು ಪ್ರಸ್ತಾವನೆ ಕೊಟ್ಟಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಕೊಟ್ಟಿದ್ದು ನಿಜ. ಪ್ರಪೋಸಲ್ ಯಾವುದಕ್ಕೆ ಸಂಬಂಧಪಟ್ಟಿತ್ತು ಎಂದರೆ sharing of the seats ಬಗ್ಗೆ ಕೊಟ್ಟಿದ್ದರು. ಅವರ ಪ್ರಪೋಸಲ್ ಏನಿದೆ ಅದನ್ನು ನನ್ನ ನೆನಪಿದ್ದಷ್ಟು ಹೇಳುತ್ತೇನೆ ಅದರಲ್ಲಿ ತಪ್ಪಿದ್ದರೆ ಅವರು ತಿದ್ದಿಕೊಳ್ಳಲಿ, ಏಕೆಂದರೆ, ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವುದರಿಂದ ನಮ್ಮ ಅಧಿಕಾರಿಗಳು ಇರಲಿಕ್ಕಿಲ್ಲ. ಆದರೂ ನನಗೆ ತಿಳಿದ ಮಟ್ಟಿಗೆ ನಾನು ಹೇಳುತ್ತೇನೆ. 75 ಪರ್ಸೆಂಟ್ ಸೀಟಿಗೆ ಉಳಿಸಿಕೊಳ್ಳಬೇಕು. Whether it is free or payment, but you will know that. ಕೊನೆಗೆ ಏನು ಆಗುತ್ತದೆ ನೋಡೋಣ. 25 ಪರ್ಸೆಂಟ್ ಮ್ಯಾನೇಜ್‌ಮೆಂಟ್‌ಗೆ ಕೊಡಬೇಕೆಂದು ತಮ್ಮ ಪ್ರಪೋಸಲ್ ಇತ್ತು ಇಲ್ಲವೆಂದಲ್ಲ. ಕೇಂದ್ರ ಸರ್ಕಾರದ ಜವಾಬ್ದಾರಿ, ಇವೆರಡಕ್ಕೆ ಸ್ಪಷ್ಟೀಕರಣ ಕೊಡಬೇಕಾಗಿದೆ. ಕೇಂದ್ರದಲ್ಲಿ ನಿಮ್ಮ ಸರ್ಕಾರ ಇದೆ ಅವರೂ ಕೂಡ ಸುಮ್ಮನೆ ಕುಳಿತಿಲ್ಲ ಅವರು ಕೂಡ ಆ್ಯಕ್ಟೀವ್ ಆಗಿದ್ದಾರೆ, ಅಡಿಷನಲ್ ಇನ್‌ಫಾರ್ಮ್‌ಮೇಷನ್ ನಿಮಗೆ ಗೊತ್ತಾಗಲಿ ಎಂದು ಸದನದ ಮೂಲಕ ಎಲ್ಲರಿಗೂ ಕೊಡುತ್ತೇನೆ. ಈ ತಿಂಗಳ ಮೊದಲ ವಾರದಲ್ಲಿ ಕೇಂದ್ರ ಸರ್ಕಾರದ ಆರೋಗ್ಯ ಕಾರ್ಯದರ್ಶಿಗಳು ಒಂದು ಸಭೆಯನ್ನು ಕರೆದರು, ಆ ಸಭೆಗೆ ಎಲ್ಲಾ ರಾಜ್ಯಗಳ ಅಧಿಕಾರಿಗಳನ್ನು ಆಮಂತ್ರಿಸಿದ್ದರು, ಕಾನೂನು ತಜ್ಞರೂ ಕೂಡ ಅಲ್ಲಿ ಇದ್ದರೆಂದು ನಾನು ಕೇಳಿದ್ದೇನೆ, ನಮ್ಮ ಅಧಿಕಾರಿಗಳೂ ಕೂಡ ಭಾಗವಹಿಸಿದ್ದರು, ಕೂಲಂಕಷವಾಗಿ ಚರ್ಚೆಯಾಯಿತು. ನಮ್ಮ ಅಧಿಕಾರಿಗಳು ಅಲ್ಲಿಗೆ ನೋಟಿಸ್ ತೆಗೆದುಕೊಂಡು ಹೋಗಿದ್ದಾರೆ, ಸಭೆಯಲ್ಲಿ ಎಲ್ಲರ ವಿಚಾರವನ್ನು ಕೇಳಿದ ಮೇಲೆ ಕೊನೆಯಲ್ಲಿ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳು ಬಹಳ ವಿಸ್ತೃತವಾದ ಒಂದು ಸ್ಪಷ್ಟೀಕರಣ, ವಿವರಣೆಯನ್ನು ಕೊಟ್ಟು ಒಂದು ಸೂಚನೆಯನ್ನು ಅವರು ಕೊಟ್ಟಿದ್ದರು. ರಾಜ್ಯ ಸರ್ಕಾರಗಳು ತಮ್ಮದೇ ಕಾನೂನು ಮಾಡಿ ತಿದ್ದುಪಡಿ ತಂದು ನಿರ್ಣಯ ಮಾಡತಕ್ಕಂಥದ್ದಲ್ಲ, ಇದು ಪಾರ್ಲಿಮೆಂಟೇ ಮಾಡಬೇಕಾಗುತ್ತದೆ ಅದಕ್ಕಾಗಿ ನಾವು ಈಗಾಗಲೇ ಅಟಾರ್ನಿ ಜನರಲ್ ರವರನ್ನು ಸಂಪರ್ಕ ಮಾಡಿದ್ದೇವೆ, ನಾವು ಅವರಿಗೆ ಏನು ಸೂಚನೆ ಕೊಟ್ಟಿದ್ದೇವೆಂದರೆ, ನೀವು ಹಿರಿಯ ಸುಪ್ರೀಂ ಕೋರ್ಟಿನ ಜಡ್ಜ್‌ಗಳ ಜೊತೆಯಲ್ಲಿ ಈ ತೀರ್ಪಿನ ಬಗ್ಗೆ ಸಮಾಲೋಚಿಸಿ, ಒಂದು ಪ್ರಪೋಸಲ್ ಅನ್ನು ಸರ್ಕಾರಕ್ಕೆ ಕೊಡಬೇಕು, ಆ ಪ್ರಪೋಸಲ್ ಬಂದ ಮೇಲೆ ನಾವು ಪಾರ್ಲಿಮೆಂಟ್‌ನಲ್ಲಿ ಎನಾಕ್ಟ್ ಮಾಡಬೇಕೋ ಏನು ಮಾಡಬೇಕೊ ಅದನ್ನು ವಿಚಾರ ಮಾಡುತ್ತೇವೆಂದು ಹೇಳಿ ಅವರನ್ನು ತಮ್ಮ ತಮ್ಮ ರಾಜ್ಯಗಳಿಗೆ

ವಾಪಸ್ ಕಳುಹಿಸಿದ್ದಾರೆ. ತಾವು ಕೂಡ ಎನ್‌ಡಿಎ ಸರ್ಕಾರದಲ್ಲಿ ಆ್ಯಕ್ಟೀವ್ ಆಗಿದ್ದೀರಿ, ನಾವೂ ಕೂಡ ಆ್ಯಕ್ಟೀವ್ ಆಗಿದ್ದೇವೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಕ್ಲಾರಿಟಿ ಇಲ್ಲದೇ ಇರುವುದಕ್ಕಾಗಿ ಸ್ವಲ್ಪ ವಿಳಂಬವಾಗಿದೆ ಎಂದು ವಿನಂತಿ ಮಾಡಿಕೊಂಡರು. ಹೀಗಾಗಿ ಸಧ್ಯಕ್ಕೆ ಇದನ್ನು ಅಷ್ಟಕ್ಕೆ ಮುಗಿಸುವುದು ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ರಾಮದಾಸ್‌ರವರು ಹೇಳಿದ್ದಕ್ಕೆ ಒಂದೇ ಒಂದು ಕ್ಲಾರಿಫಿಕೇಷನ್ ಹೇಳುವುದಾದರೆ, in list 'A' concurrent list Schedule VII - 25 Education including technical education, medical education and Universities subject to the provisions of entry 63, 64, 65 and 66. This is the education in the concurrent list. Therefore, ಅದಕ್ಕೆ ನಾನು ಹೇಳಿದ್ದು, ಸಪರೇಟ್ ಶಾಸನ ತರಲಿಕ್ಕೆ ಆಗುವುದಿಲ್ಲ, ಈಗ ಅವರೇನು ಕ್ಲಾರಿಫಿಕೇಷನ್ ಕೊಟ್ಟರು ಅದು ಇನ್ನೂ ಹೆಚ್ಚಿಗೆ ರಾಷ್ಟ್ರೀಯವಾದಂಥ ಕ್ಲಾರಿಟಿ ತೆಗೆದುಕೊಂಡು ಹೋಗುತ್ತಿದ್ದೇವೆ ಅದು ಬಂದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಸ್ವಲ್ಪ ಕಾಯಿತ್ತಿದ್ದೇವೆಯೇ ಹೊರತು, ರಾಜ್ಯ ಸರ್ಕಾರವೇ ಒಂದು ತೀರ್ಮಾನ ತೆಗೆದುಕೊಳ್ಳಬೇಕು ಮತ್ತೆ ಕೋರ್ಟಿಗೆ ಹೋಗಬೇಕು, ಮತ್ತೆ ಸ್ಟೇ ಆಗಬೇಕು, ಮತ್ತೆ ಗೊಂದಲಗಳು ಆಗಬೇಕು, ಎಂಬುದನ್ನು ತಪ್ಪಿಸುವುದು ನಮ್ಮ ಉದ್ದೇಶ, ಕೇರಳದಲ್ಲಿ ಈಗಾಗಲೇ ದೊಡ್ಡ ಗೊಂದಲಕ್ಕೆ ಎಡೆ ಮಾಡಿದ್ದಾರೆ. ಸ್ಟೇ ಕೊಟ್ಟಿದ್ದಾರೆ, ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ, So, we are watching the developments. Please bear with us. It may not take much time. Only thing is ಕೇಂದ್ರ ಸರ್ಕಾರದ initiation ಬಗ್ಗೆ ಅವರು ಮಾತನಾಡಿದರು. ನಾನು ಅದನ್ನು ಹೇಳುವುದಕ್ಕೆ ಹೋಗಿರಲಿಲ್ಲ, ಏಕೆಂದರೆ ಈಗ ನಡೆಯತಕ್ಕಂಥ ವಿದ್ಯಮಾನಗಳು ತಮ್ಮ ಗಮನಕ್ಕೆ ಇರಲಿ, concurrent list ನಲ್ಲಿರುವುದರಿಂದ ಅವರು ಏನೋ ಶಾಸನ ತರುವಂಥ ಪ್ರಯತ್ನ ನಡೆದಿದೆ, ಸಧ್ಯ 7 ಅಥವಾ 8ನೇ ತಾರೀಖು ಪಾರ್ಲಿಮೆಂಟ್ ಸೇರುವುದರಲ್ಲಿದೆ, ಅಷ್ಟರೊಳಗೆ ನಾವು ಏನಾದರೂ ಅತುರವಾಗಿ ನಿರ್ಣಯ ತೆಗೆದುಕೊಂಡು, ಆದರಿಂದ ಉಪಯೋಗ ಇಲ್ಲದೇ ಇರುವ ನಿರ್ಣಯ ಆಗಬಾರದು ಎನ್ನುವ ದೃಷ್ಟಿಯಿಂದ, ಎಲ್ಲಾ ರೀತಿಯ ಆಲೋಚನೆಗಳನ್ನು ಸಮಗ್ರವಾಗಿ ನಡೆಸಿದ್ದೇವೆ, ನಾವು ಯಾವುದಕ್ಕೂ ತೊಂದರೆಯಾಗದ ಹಾಗೆ ಸರ್ಕಾರ ನಡೆದುಕೊಳ್ಳುತ್ತದೆ ಎನ್ನುವ ವಿಶ್ವಾಸ ಹಾಗೂ ಭರವಸೆ ಮಾತ್ರ ಈ ಸದನಕ್ಕೆ ಕೊಡಬಯಸುತ್ತೇನೆ.

Mr. Speaker:- I think the Government has sufficiently answered.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಅದು ಅಲ್ಲ, ಇದರಲ್ಲಿ ಕ್ಲಾರಿಟಿ ಇಲ್ಲ ಸರ್ಕಾರ ಇದೇ ರೀಯಿಯ ಧಾಟಿಯಲ್ಲಿ ಹೋಗುತ್ತಿದೆ, ಇವತ್ತೇನು ಮಾಲಕರೆಡ್ಡಿಯವರು, ಕೇಂದ್ರ ಸರ್ಕಾರದ ಸಚಿವಾಲಯದಲ್ಲಿ ಸಭೆ ನಡೆಸಿದರೆಂದು ಏನು ಹೇಳಿದರು ಅಲ್ಲಿ ಕೇವಲ ಫೀ ಸ್ಟ್ರಕ್ಚರ್ ಬಗ್ಗೆ ಮಾತ್ರ ಡಿಸ್ಕ್ಷನ್ ಆಗಿದೆ. ಉಳಿದಿದ್ದು ಈ ಸುಪ್ರೀಂ ಕೋರ್ಟಿನ ತೀರ್ಪು ನಂತರ ಏನ್ಮಾಡಬೇಕು, ಆ ಬಗ್ಗೆ ಏನೂ ಡಿಸ್ಕ್ಷನ್ ಆಗಿಲ್ಲ. ನಮಗೆ ಬಂದ ಮಾಹಿತಿ ಪ್ರಕಾರ ಅಲ್ಲಿ ಕೇವಲ ಫೀ ಸ್ಟ್ರಕ್ಚರ್ ಬಗ್ಗೆ ಚರ್ಚೆ ಆಗಿದೆ. ಏಕೆಂದರೆ, ಮಾನ್ಯ ಮಾಲಕ ರೆಡ್ಡಿಯವರು ಈ ತಿಂಗಳ ಮೊದಲ ವಾರದಲ್ಲಿ ಸಭೆ ನಡೆಯಿತು ಎಂದು ಹೇಳಿದರು, ಹಾಗಾದರೆ ಈ ವಿಷಯ ಇವತ್ತು ಅಂದರೆ ಮಾರ್ಚ್ 31ಕ್ಕೆ ಸದನದಲ್ಲಿ ಬಂದಿದೆ, ನಾವು 10ನೇ

ತಾರೀಖು ಸದನದಲ್ಲಿ ರೈಜ್ ಮಾಡಿದರೆ ಇವತ್ತು ಇದನ್ನು ಡಿಸ್‌ಕ್ಲೋಜ್ ಮಾಡುತ್ತಾರೆ, ಹಾಗಾದರೆ ಸರ್ಕಾರದ ಸ್ಟ್ಯಾಂಡ್ ಏನು ಎಂಬುದರ ಬಗ್ಗೆ ಇವತ್ತಿಗೂ ಕ್ಲಿಯರ್ ಆಗುತ್ತಿಲ್ಲ. ಕೇಂದ್ರ ಸರ್ಕಾರದ ಮೇಲೆ ಹಾಕುವಂಥದ್ದು, ಏನು ಸಭೆ ನಡೆದಿದೆ, ಹೀಗೆ ಇದೇ ರೀತಿಯಾಗಿ ಗೊಂದಲ ನಿರ್ಮಾಣ ಮಾಡುವುದು ಕಂಟಿನ್ಯೂ ಆಗಿದೆ, ಅದಕ್ಕಾಗಿ ಈ ಸರ್ಕಾರ ಗೊಂದಲ ನಿರ್ಮಾಣ ಮಾಡುತ್ತಿರುವುದು ಮುಂದುವರಿಯುತ್ತಿದೆ. ಇದಕ್ಕೆ ನಿಮ್ಮ ಕ್ಲಿಯರ್ ಸ್ಟ್ಯಾಂಡ್ ಏನು ಎಂಬುದನ್ನು ಹೇಳಬೇಕಾಗುತ್ತದೆ, ಇಲ್ಲದಿದ್ದರೆ, ನೀವು ಕ್ಲಿಯರ್ ಸ್ಟ್ಯಾಂಡ್ ತೆಗೆದುಕೊಳ್ಳುವ ತನಕ ನಾವು ಸದನ ನಡೆಸಲು ಬಿಡುವುದಿಲ್ಲ. ಏಕೆಂದರೆ, ಇವತ್ತಿನ ದಿವಸ ಇದರ ಬಗ್ಗೆ ಒಂದು ಕ್ಲಿಯರ್ ಸ್ಟಾಂಡ್ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಇಡೀ ಕರ್ನಾಟಕ ರಾಜ್ಯದ ಮಧ್ಯಮ ಮತ್ತು ಬಡವರ್ಗದ ವಿದ್ಯಾರ್ಥಿಗಳ ಭವಿಷ್ಯ ಇದರಲ್ಲಿ ಅಡಗಿದೆ. ಇವತ್ತಿನ ದಿವಸ ನಿರ್ಮಾಣ ಆಗಿರತಕ್ಕಂಥ ಗೊಂದಲವನ್ನು ಸರ್ಕಾರ ಮುಂದುವರಿಸಿಕೊಂಡು ಹೋಗತಕ್ಕಂಥ ಲಕ್ಷಣ ಕಾಣುತ್ತಿದೆ. ಇದರ ಬಗ್ಗೆ ಪ್ರತಿಸಲ ಒಂದಲ್ಲ ಒಂದು ಹೇಳತಕ್ಕಂಥದನ್ನು ತಾವು ಮಾಡಿಕೊಳ್ಳುತ್ತಾ ಬಂದಿದ್ದೀರಿ. ಡಾ: ಪರಮೇಶ್ವರ್ ರವರು ಬಂದು ಉತ್ತರ ಕೊಡುತ್ತಾರೆಂದು ಕಳೆದ ಸಲ ಈ ವಿಷಯವನ್ನು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಹೇಳಿದ್ದೀರಿ. ಆದರೆ, ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ಶಬ್ದ ಹೇಳುವುದಕ್ಕೂ ನೀವು ತಯಾರಿರಲಿಲ್ಲ. ಹಾಗೆಯೇ ಅವತ್ತಿನ ದಿವಸ ಉತ್ತರ ಹೇಳದೆ ಹೇಗೋ ಚರ್ಚೆಯನ್ನು ಧಾಟಿಸಿಕೊಂಡು ಬಂದು ಇವತ್ತು ಕೂಡ ಡಾ: ಪರಮೇಶ್ವರ್‌ರವರು ಬಂದಿಲ್ಲವೆಂದು ಇದರ ಬಗ್ಗೆ ಕ್ಲಿಯರ್ ಉತ್ತರ ಹೇಳುತ್ತಿಲ್ಲ. ಇವತ್ತು 31ನೇ ತಾರೀಖು ಈ ಸದನ ಮಧ್ಯಾಹ್ನ ಮುಗಿಯಬಹುದು. ಸದನ ಮುಕ್ತಾಯವಾದ ನಂತರ ನಾವು ಮುಂದಕ್ಕೆ ಏನು ಬೇಕಾದರೂ ಮಾಡಿಕೊಂಡರೂ ನಡೆಯುತ್ತದೆ ಎಂದು ತಾವು ತಿಳಿದುಕೊಳ್ಳತಕ್ಕಂಥದ್ದು ಸರಿಯಲ್ಲ. ಆದ್ದರಿಂದ, ಇದರ ಬಗ್ಗೆ ಸರ್ಕಾರದ ಸ್ಟಾಂಡ್ ಏನು ಎನ್ನತಕ್ಕಂಥ ಕ್ಲಿಯರ್ ಆಗ ಬೇಕಾಗಿದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಸದರಿ ವಿಷಯಕ್ಕೆ ಸಂಬಂಧ ಪಡದೇ ಇರತಕ್ಕಂಥ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಶನಿವಾರ ವಿಧಾನ ಸಭೆ ನಡೆಯುತ್ತಿರುವ ಸಂದರ್ಭದಲ್ಲಿ ನಮ್ಮ ಶಾಸಕ ಮಿತ್ರರಾದ ಮಾನ್ಯ ಯು.ಆರ್. ಸಭಾಪತಿಯವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡಿದ್ದರು. ಆ ದಿನ ಸದನ ಬೆಳಿಗ್ಗೆ 9.30 ಅಥವಾ 10.00 ಗಂಟೆಗೆ ಪ್ರಾರಂಭವಾಗಿದ್ದು ಆ ಸಮಯಕ್ಕೆ ನಾವೆಲ್ಲರೂ ಕೂಡ ಬಂದಿದ್ದೇವೆ. ಆದ್ದರಿಂದ, ಸದನದ ಸಭೆಯನ್ನು ಮುಂದೂಡಿ ಎಂದು ನಿಮ್ಮ ಸ್ಥಾನದಲ್ಲಿ ಕುಳಿತುಕೊಂಡಿದ್ದ ಶಾಸಕರ ಜೊತೆಯಲ್ಲಿ ನಾನು ಸ್ವಲ್ಪ ವಾಗ್‌ಯುದ್ಧಕ್ಕೆ ಇಳಿದಿದ್ದು ನಿಜ. ಆ ಸಂದರ್ಭದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮತ್ತು ಮಾನ್ಯ ಗೃಹ ಮಂತ್ರಿಯವರು ಮಧ್ಯ ಪ್ರವೇಶ ಮಾಡಿದರು. ಆ ದಿನ ನಾನು ಮಾಡಿದ ವರ್ತನೆ ಸರಿ ಇರಲಿಲ್ಲವೆಂದು ನನಗೂ ಕೂಡ ಅನಿಸಿತು. ಆದ್ದರಿಂದ, ಈ ಸದನದ ಕ್ಷಮೆಯನ್ನು ಕೇಳುತ್ತಿದ್ದೇನೆ. ಹಾಗೆಯೇ, ಇದು ನನಗೂ ಕೂಡ ನೋವು ಉಂಟಾಗಿರುವ ವಿಚಾರವಾಗಿದೆ. ಏಕೆಂದರೆ, ನಾವು ಕೆಲವು ಸತ್ಸಂಪ್ರದಾಯಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಆ ದಿನ ನಡೆದುಕೊಂಡಿರತಕ್ಕಂಥದು ಸರಿಯಲ್ಲವೆಂದು ಪೀಠದ ಕ್ಷಮೆಯನ್ನು ಕೇಳುತ್ತೇನೆ. ಹಾಗೆಯೇ,

ಮಾನ್ಯ ಯು.ಆರ್. ಸಭಾಪತಿಯವರಿಗೆ ಏನಾದರೂ ನೋವಾಗಿದ್ದರೆ ದಯವಿಟ್ಟು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ನೆನ್ನೆದಿವಸ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೆ ನಾನು ದೂರವಾಣಿ ಮಾಡಿದ್ದೆ. ಆಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಸಿಗಲಿಲ್ಲ. ಆದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಿಕ್ಕಿದ್ದರು. ನಾನು ಇದಕ್ಕೆ ಸಂಬಂಧಪಟ್ಟಂತೆ ಇಷ್ಟು ಹೇಳುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಶ್ರೀ ಬಿ.ಎನ್. ಬಚ್ಚೇಗೌಡರವರು ಮತ್ತು ಶ್ರೀ ಬಿ. ಸೋಮಶೇಖರ್‌ರವರು ಹಾಗೂ ಶ್ರೀ ಚನ್ನಿಗಪ್ಪನವರು ಈಗಾಗಲೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಇವತ್ತಿನ ದಿವಸ ಸ್ವಲ್ಪ ತಡವಾಗಿ ಬಂದಿದ್ದೇನೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, 3ನೇ ತಾರೀಖಿನಿಂದ ಖಾಸಗಿ ಕಾಲೇಜಿನ ಮ್ಯಾನೇಜ್‌ಮೆಂಟ್‌ನವರು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಅಡ್ಮಿಷನ್‌ಗಳನ್ನು ಅವರು ನಿಗದಿ ಮಾಡಿರತಕ್ಕಂಥ ಫೀ ಪ್ರಕಾರ ಅಡ್ಮಿಷನ್ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ ಎನ್ನತಕ್ಕಂಥದ್ದು ಜಗದ್‌ಜಾಹೀರ ಆಗಿದೆ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಅವರು ಈಗಾಗಲೇ ಅನಧಿಕೃತವಾಗಿ ಕಳೆದ 15 ದಿವಸಗಳಿಂದ ಫೀ ತೆಗೆದುಕೊಂಡು ಅಡ್ಮಿಷನ್ ಪ್ರಾರಂಭ ಮಾಡಿರತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕ ಜನ ಪೋಷಕರು ನನಗೆ ಪತ್ರ ಬರೆದು ಇದನ್ನು ತಿಳಿಸಿದ್ದಾರೆ. ಸುಮ್ಮನೆ ಹೇಳಬೇಕೆಂಬ ದೃಷ್ಟಿಯಿಂದ ನಾನು ಇಲ್ಲಿ ಈ ವಿಷಯವನ್ನು ಹೇಳುತ್ತಿಲ್ಲ. ಅನೇಕ ಜನ ಪೋಷಕರು ಮತ್ತು ಸರ್ಕಾರಿ ನೌಕರರು ನನ್ನ ಹತ್ತಿರ ಬಂದಿದ್ದರು. ಇವತ್ತಿನ ದಿವಸ ಅಡ್ಮಿಷನ್‌ಗೋಸ್ಕರ 2.5 ಅಥವಾ 3.5 ಯಿಂದ 4.00 ಲಕ್ಷ ರೂಪಾಯಿ ಹೇಗೆ ಕೊಡುವುದಕ್ಕಾಗುತ್ತದೆ ಮತ್ತು ಖಾಸಗೀಕರಣದ ಭೂತದ ರೀತಿಯಲ್ಲಿ ಇಷ್ಟು ಬೇಗ ಬೆಳೆಯುತ್ತದೆ ಎಂದು ನಾವು ತಿಳಿದುಕೊಂಡಿರಲಿಲ್ಲ ಎಂದು ಕಣ್ಣೀರು ಹಾಕಿಕೊಂಡು ನನ್ನ ಹತ್ತಿರ ಹೇಳಿದರು. ಹಾಗೆಯೇ ಇದರಿಂದ ನಮಗೆ ಹೆಚ್ಚಿನ ಅನಾನುಕೂಲತೆ ಆಗುತ್ತದೆ. ಆದ್ದರಿಂದ, ದಯವಿಟ್ಟು ಏನಾದರೂ ಮಾಡಿ ಸರ್ಕಾರದ ಕಡೆಯಿಂದ ತಪ್ಪಿಸುವುದು ಒಳ್ಳೆಯದು. ಇಲ್ಲದಿದ್ದರೆ ನಮಗೆ ತೊಂದರೆಯಾಗುತ್ತದೆ ಎಂದು ಅನೇಕ ಜನ ಪೋಷಕರು ನನ್ನ ಹತ್ತಿರ ಹೇಳಿದರು. ಇವತ್ತಿನ ದಿವಸ ಸರ್ಕಾರಕ್ಕೂ ಕೂಡ ಇಕ್ಕಟ್ಟಿನ ಪರಿಸ್ಥಿತಿಗಳು ಇರಬಹುದು. ಏಕೆಂದರೆ, ಇವತ್ತಿನ ದಿವಸ ಮಂತ್ರಿಮಂಡಲದಲ್ಲಿರತಕ್ಕಂಥ ಕೆಲವೂ ಗೌರವಾನ್ವಿತ ಸದಸ್ಯರುಗಳು ಆಡಳಿತ ಮಂಡಳಿಯ ಅಧ್ಯಕ್ಷರು ಆಗಿರಬಹುದು ಅಥವಾ ಆಡಳಿತ ಮಂಡಳಿಯ ಜೊತೆ ಇರಬಹುದು. ಮಾನ್ಯ ಜಾಲಪ್ಪನವರು ನಮ್ಮ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ದಿವಂಗತ ದೇವರಾಜ ಅರಸುರವರ ನೆನಪಿಗೋಸ್ಕರ ಮೆಡಿಕಲ್ ಕಾಲೇಜ್‌ನ್ನು ಪ್ರಾರಂಭ ಮಾಡಬೇಕೆಂದು ಕೇಳಿದಾಗ ಮಾನ್ಯ ಬೈರೇಗೌಡರ ನೇತೃತ್ವದಲ್ಲಿ ಜಮೀನು ಕೊಟ್ಟು ದೇವರಾಜ ಅರಸು ಮೆಡಿಕಲ್ ಕಾಲೇಜು ಮಾಡುವುದಕ್ಕೆ ಎಲ್ಲಾ ರೀತಿಯ ಸಹಕಾರವನ್ನು ನಾವು ಮಾನ್ಯ ಜಾಲಪ್ಪನವರಿಗೆ ಕೊಟ್ಟೆವು. ಈ ಸದನದ ಸದಸ್ಯರು ಆಗದೇ ಇರತಕ್ಕಂಥ ಅನೇಕ ಜನರು ಮತ್ತು ಈಗ ವೈದ್ಯಕೀಯ ಶಿಕ್ಷಣ ಸಚಿವರಾಗಿರತಕ್ಕಂಥ ಡಾ: ಮಾಲಕರೆಡ್ಡಿಯವರು ಹೆಚ್.ಕೆ.ಇ.ಎಸ್. ಸಂಸ್ಥೆಯ ಅಧ್ಯಕ್ಷರಾಗಿದ್ದರು. ಇದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ನಮ್ಮ ತಕರಾರು ಇರತಕ್ಕಂಥದ್ದು ಏನೆಂದರೆ, ಒಂದು ಮಾತನ್ನು ನಾನು ಇಲ್ಲಿ ಬಹಳ ಪ್ರಾಮಾಣಿಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ, ವಾಸ್ತವಾಂಶದಲ್ಲಿ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂಥ ವಿಚಾರವಲ್ಲ. ಕೇಂದ್ರ

ಸರ್ಕಾರಕ್ಕೂ ಮತ್ತು ಇದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಗುಡ್ ಫೈತ್‌ಗೋಸ್ಕರ ಅವರೊಂದು ಸಭೆ ಕರೆದಿರಬಹುದಷ್ಟೆ. ಒಂದು ವೇಳೆ ಇದು ಏನಾದರೂ ಕೇಂದ್ರ ಸರ್ಕಾರಕ್ಕೆ ಒಳಪಟ್ಟಿದ್ದರೆ ನಮ್ಮ ಲೋಕಸಭಾ ಸದಸ್ಯರು ಇದರ ಬಗ್ಗೆ ಹೋರಾಟ ಮಾಡುತ್ತಿದ್ದರು. ನಮ್ಮ ಲೋಕಸಭೆಯ ಸದಸ್ಯರು ಕಡಿಮೆ ಏನಿಲ್ಲ. ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಸಿ.ಇ.ಟಿ. ಇಡೀ ದೇಶಕ್ಕೆ ಮಾದರಿಯಾಗಿರತಕ್ಕಂಥದ್ದು. ಆದ್ದರಿಂದ, ತಮ್ಮಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನೀವು ಮತ್ತೆ ಸುಪ್ರೀಂ ಕೋರ್ಟ್‌ಗೆ ಹೋಗದಿದ್ದರೂ ಸಹ ಸಾರ್ವಜನಿಕರ ಹಿತಾಸಕ್ತಿಗೆ ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಮಾನವನ್ನು ನಾವೇ ಪ್ರಶ್ನೆ ಮಾಡುತ್ತೇವೆ. ಇದಕ್ಕೆ ಸಂಬಂಧಪಟ್ಟಂತೆ ಇಲ್ಲಿಗೆ ನಮ್ಮ ಹೋರಾಟ ನಿಲ್ಲಿಸುವುದಿಲ್ಲ. ಹಾಗೆಯೇ, ಈ ಸದನದಲ್ಲಿ ನಾವು ಕೇಳಿ ಬಿಟ್ಟಿಬಿಡಬಹುದೆಂದಾಗಲಿ ಅಥವಾ ಇದಕ್ಕೆ ಸಂಬಂಧಪಟ್ಟಂತೆ ನಾವು ಧರಣಿ ಅಥವಾ ಸಭಾತ್ಯಾಗ ಮಾಡಿ ಹೋಗುತ್ತೇವೆಂದು ತಾವು ಭಾವಿಸಿಕೊಳ್ಳಬೇಡಿ. ಪೋಷಕರ ಕಡೆಯಿಂದ ನಮ್ಮ ಪಕ್ಷದ ಕಡೆಯಿಂದ ಇದನ್ನು ಮತ್ತೆ ಸುಪ್ರೀಂ ಕೋರ್ಟ್‌ಗೆ ಕೊಶ್ಚನ್ ಮಾಡುತ್ತೇವೆ. ಇದನ್ನು ನಾವು ಇಲ್ಲಿಗೆ ಬಿಡುವುದಿಲ್ಲ. ಇವತ್ತಿನದಿವಸ ಅವರು ಹಗಲು ದರೋಡೆ ಮಾಡುತ್ತಿದ್ದಾರೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಅಪ್ಪರ್ ಮಿಡ್ಲ್‌ಕ್ಲಾಸ್ ಮತ್ತು ರಿಚ್ ಪೀಪಲ್ಸ್ ಮಕ್ಕಳು ಇವತ್ತಿನ ದಿವಸ ಡಾಕ್ಟರ್ ಮತ್ತು ಇಂಜಿನಿಯರ್ಸ್ ಆಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಮೆರಿಟ್ ಇರತಕ್ಕಂಥ ಹಿಂದುಳಿದ ವರ್ಗ ಮತ್ತು ಎಸ್.ಸಿ : ಎಸ್.ಟಿ. ಜನಾಂಗದ ವಿದ್ಯಾರ್ಥಿಗಳು ಇದರಿಂದ ಸರ್ವನಾಶ ಆಗುತ್ತಾರೆ. ಇವತ್ತಿನ ದಿವಸ ಈ ಒಂದು ವರ್ಗದವರು ಉಸಿರು ಎತ್ತುವುದಕ್ಕೂ ಕೂಡ ಆಗದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಅಧಿಕಾರದ ಪೊರೆ ನಿಮ್ಮ ಸುತ್ತಾ ಇದೆ. ಆ ಪೊರೆಯಿಂದ ಆಚೆಗೆ ಬರುವುದಕ್ಕೆ ಹೊರಕ್ಕೆ ಬಂದ ಮೇಲೆ ನಿಜವಾದ ಪರಿಸ್ಥಿತಿ ಏನು ಎನ್ನತಕ್ಕಂಥದ್ದು ನಿಮಗೆ ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, 2002-2003ನೇ ಸಾಲಿನಲ್ಲಿ ಯಾವ ರೀತಿಯಾದ ಅಡ್ಮಿಷನ್ ಇತ್ತೋ ಅದೇ ರೀತಿಯಲ್ಲಿ 2003-2004ನೇ ಸಾಲಿನ ಹೊತ್ತಿಗೆ ನೀವು ಇನ್ನು ಒಂದು ವರ್ಷ ಅಧಿಕಾರದಲ್ಲಿರುತ್ತೀರಿ. ಆ ಒಂದು ಅವಧಿಯಲ್ಲಿ ತಾವು ಸುಪ್ರೀಂ ಕೋರ್ಟ್‌ಗೆ ಹೋಗುವಂಥದ್ದನ್ನು ಮಾಡಬಹುದು. ಹಾಗೆಯೇ ಪ್ರೆಸಿಡೆಂಟ್ ಆಫ್ ಇಂಡಿಯಾ ಮತ್ತು ಪ್ರಧಾನ ಮಂತ್ರಿಯವರನ್ನು ಹಾಗೂ ಯೂನಿಯನ್ ಲಾ ಮಿನಿಸ್ಟರ್‌ರವರನ್ನು ಹೋಗಿ ಭೇಟಿ ಮಾಡಬಹುದು. ಆ ಸಂದರ್ಭದಲ್ಲಿ ನಾವೂ ಕೂಡ ಬರುತ್ತೇವೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಿಚಾರದ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕೆಂಬ ದೃಷ್ಟಿಯಿಂದ ಒಂದು ನಿರ್ಣಯವನ್ನು ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ತೆಗೆದುಕೊಂಡು ಬಂದಿದ್ದೆವು. ಇದಾದ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಸಹ ಇದರ ಬಗ್ಗೆ ಪ್ರಯತ್ನ ಮಾಡಿದರು. ಮತ್ತೆ ಈಗ ಮತ್ತೊಮ್ಮೆ ಸರ್ವಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತೇನೆಂದು ವಿಧಾನ ಪರಿಷತ್‌ನಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಹೇಳಿದ್ದಾರೆ. ಇದು ಒಳ್ಳೆಯ ಕೆಲಸವಾಗಿರುವುದರಿಂದ ನಾವೆಲ್ಲರೂ ಕೂಡ ಬರುತ್ತೇವೆ. ಇದೇ ಸಂದರ್ಭದಲ್ಲಿ ಈ ಒಂದು ವಿಷಯವನ್ನೂ ಕೂಡ ಅಲ್ಲಿ ಪ್ರಸ್ತಾಪ ಮಾಡೋಣ. ಆದರೆ, ಇವತ್ತು ಸದನ ಮುಗಿಯುತ್ತಿದೆ. ಮತ್ತೆ ವಿಷಯ ಸಮಿತಿಯ ಸಭೆಗಳು ಮುಗಿದ ನಂತರ ಈ ಸದನ ಜುಲೈ ತಿಂಗಳು 15 ಅಥವಾ 20ನೇ ತಾರೀಖು ಸೇರಬಹುದು. ಆದರೆ ಈ ಸಂದರ್ಭದಲ್ಲಿ ನಾವು ಜನಗಳಿಗೆ ಏನು ಉತ್ತರ ಕೊಡಬೇಕು. ಮತ್ತೆ ಇದರ ಬಗ್ಗೆ

ಏನು ಸಾಧನೆ ಮಾಡಿದಂತಾಯಿತು? ಆದ್ದರಿಂದ, ಕಳೆದ ವರ್ಷ ಏನೊಂದು ವ್ಯವಸ್ಥೆ ಇತ್ತು, ಅದೇ ರೀತಿಯಲ್ಲಿ ಈ ಸಾರಿಯೂ ಕೂಡ ಇರುತ್ತದೆ ಎನ್ನತಕ್ಕಂಥ ಒಂದು ಖಚಿತವಾದ ಉತ್ತರ ಕೊಡಬೇಕು. ಇವತ್ತಿನ ದಿವಸ 1 ಲಕ್ಷ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಇರತಕ್ಕಂಥ ಸುಮಾರು 20 ಲಕ್ಷ ಜನಗಳಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರವಾಗಿದೆ. ಆದ್ದರಿಂದ, ಅವರ ಭವಿಷ್ಯದ ಜೊತೆ ಚೆಲ್ಲಾಟವಾಡಬೇಡಿ. ಈ ಸಂದರ್ಭದಲ್ಲಿ ನಾನು ಇನ್ನೊಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತಿನ ದಿವಸ ಸರ್ಕಾರಿ ಆಸ್ಪತ್ರೆಗಳಲ್ಲಿ ಸಫಿಷಿಯೆಂಟ್ ಬೆಡ್ಸ್ ಇವೆ. ಆದ್ದರಿಂದ ಇನ್ನು 5 ಮೆಡಿಕಲ್ ಕಾಲೇಜುಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡಿದರೆ ಒಳ್ಳೆಯದು. ಇವತ್ತಿನ ದಿವಸ ಇಂಜಿನಿಯರ್ ಕಾಲೇಜುಗಳ ಪರಿಸ್ಥಿತಿ ಹೈಸ್ಕೂಲ್ ಮಟ್ಟಕ್ಕೆ ಬಂದಿದೆ. ಆದರೆ, ಪೋಸ್ಟ್ ಗ್ರಾಜ್ಯುಯೇಟ್ ಮತ್ತು ಮೆಡಿಕಲ್ ಕೋರ್ಸ್ ಹಾಗೂ ಡೆಂಟಲ್ ಕೋರ್ಸ್‌ಗೆ ಸಾಕಷ್ಟು ಫೈಟ್ ಇದೆ. ಆದ್ದರಿಂದ ಸರ್ಕಾರದಲ್ಲಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಇವತ್ತಿನ ದಿವಸ you can have 4 more medical colleges in Karnataka that is 800 seats you can get. ಈ 800 ಸೀಟುಗಳ ಜೊತೆಗೆ ಮ್ಯಾನೇಜ್‌ಮೆಂಟ್‌ನವರು ಸಿ.ಇ.ಟಿ.ಯಲ್ಲಿ ಏನು 15 ಅಥವಾ 20 ಅಥವಾ 25 ಪರ್ಸೆಂಟ್ ಕೊಡಬೇಕೆಂದು ಹೇಳುತ್ತಿದ್ದಾರೆ ಅದರ ಜೊತೆಗೆ ಇದೂ ಸಹ ಸರಿಹೋಗುತ್ತದೆ. ಇದ್ಯಾವುದನ್ನು ತಾವು ಯೋಚನೆ ಮಾಡದೆ ಇವತ್ತಿನ ದಿವಸ ಖಾಸಗಿ ಕಾಲೇಜಿನ ಮ್ಯಾನೇಜ್‌ಮೆಂಟ್‌ನವರ ಮುಲಾಜಿಗೆ ಒಳಗಾದರೆ ಹೇಗೆ? ಮಾನ್ಯ ಕಾಗೋಡು ತಿಮ್ಮಪ್ಪನವರೇ, ನೀವು ಮುಲಾಜಿಗೆ ಒಳಗಾಗಿದ್ದೀರಿ ಎಂದು ಹೇಳುತ್ತಿಲ್ಲ. ಒಳಗಾಗಬೇಡಿ ಎಂದು ನಾನು ಹೇಳುತ್ತಿದ್ದೇನೆ. ನಾನು ಹೇಳತಕ್ಕಂಥದ್ದನ್ನು ತಾವು ದಯವಿಟ್ಟು ಕೇಳಬೇಕು. ಏಕೆಂದರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಕೈ ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ತಾವೂ ಕೂಡ ಹಿರಿಯ ಸಚಿವರು. ಮತ್ತೆ ತಾವೂ ಕೂಡ ಒಂದು ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಪ್ರಯತ್ನ ಮಾಡಿದ್ದಿರಿ. ಅದು ನಿಮಗೆ ಆಗಿದ್ದರೆ ಚೆನ್ನಾಗಿರುತ್ತಿತ್ತು. ಆದರೆ, ದುರಾದೃಷ್ಟವಶಾತ್ ನಿಮಗೆ ಆಗಲಿಲ್ಲ. ಆ ಸಂದರ್ಭದಲ್ಲಿ ನಾವೂ ಕೂಡ ಸಹಕಾರ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೆವು. ಈ ನಿಮ್ಮ ಸರ್ಕಾರ ಇರುವುದರಿಂದ ಈಗ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೆವು. ಆದರೆ ಇನ್ನೂ ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಜೆ.ಹೆಚ್. ಪಟೇಲ್‌ರವರೇ ಸ್ವತಃ ಮಾನ್ಯ ಬೊಮ್ಮಾಯಿರವರ ಹತ್ತಿರ ತೆಗೆದುಕೊಂಡು ಹೋದರು. ಆಗ ಆಚೆಗೆ ನಡೆ ಎಂದು ವಾಪಸ್ಸು ಕಳುಹಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಹೇಳತಕ್ಕಂಥದು ನಿಜ. ಏಕೆಂದರೆ, ಅವರು ಮೆಡಿಕಲ್ ಕಾಲೇಜಿಗೆ ಪ್ರಯತ್ನ ಮಾಡಿದ್ದರು. ಆದರೆ ಅದು ಆಗಲಿಲ್ಲ. ಇದರ ಬಗ್ಗೆ ನನಗೇನೂ ಹೊಟ್ಟೆಕಿಚ್ಚು ಇಲ್ಲ. I want you to have 4 more medical colleges. You go ahead. ಆದರೆ, ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಮೊದಲನೆಯದಾಗಿ, 2002-2003ನೇ ಸಾಲಿನಲ್ಲಿ ಯಾವ ರೀತಿಯಾಗಿ ಮೆಟ್ರಿಕ್ಸ್ ಮಾಡಿದ್ದೀರಿ, ಅದೇ ರೀತಿಯಾಗಿ ಈ ಸಾರಿಯೂ ಮಾಡುತ್ತೇವೆಂದು ಅನೌನ್ಸ್ ಮಾಡಿ. ಹಾಗೆಯೇ, ಎರಡನೇಯದಾಗಿ ಹೇಳುವುದೇನೆಂದರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ಗೆ

ಮತ್ತು ಕೇಂದ್ರ ಸರ್ಕಾರಕ್ಕೆ ತಾವು ಏನು ಹೇಳಬೇಕೆಂದು ಪ್ರಯತ್ನ ಮಾಡುತ್ತಿದ್ದಿರೋ ಅದನ್ನು ತಾವು ಮಾಡಿಕೊಂಡು ಹೋಗಿ. ಮತ್ತೆ ಮೂರನೆಯದಾಗಿ ಹೇಳುವುದು ಏನೆಂದರೆ, ಹೆಚ್ಚು ಖರ್ಚು ಇಲ್ಲದೆ, ಸರ್ಕಾರಿ ವಲಯದಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಈಗ ಇರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ನಲ್ಲಿಯೇ ಇನ್ನೂ ನಾಲ್ಕು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಬಹುದು. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ತಾವು ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಒಂದು ತಿಂಗಳಿಂದ ನಮ್ಮನ್ನು ಯಾಮಾರಿಸಿಕೊಂಡು ನಾಳೆ ಅಥವಾ ನಾಡಿದ್ದು, ಆಚೆನಾಡಿದ್ದು ಎಂದು ಹೇಳುತ್ತಾ ಈ ಅಧಿವೇಶನ ಮುಗಿದ ಮೇಲೆ ನಮ್ಮ ದಾರಿ ನಮಗೆ, ನಿಮ್ಮ ದಾರಿ ನಿಮಗೆ ಎಂದು ಹೇಳುವುದರಿಂದ ಏನೂ ಉಪಯೋಗ ಆಗುವುದಿಲ್ಲ. ನಾನು ಈಗಾಗಲೇ ಹೇಳಿರತಕ್ಕಂಥ ಸಲಹೆ ಸರ್ಕಾರಕ್ಕೆ ಹಿತವಾಗುತ್ತದೆಯೋ ಅಥವಾ ಕಹಿ ಆಗುತ್ತದೆಯೋ ನನಗೆ ಗೊತ್ತಿಲ್ಲ. ಆದರೆ, ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾನು ಸಲಹೆ ಕೊಟ್ಟಿದ್ದೇನೆ.

12.00 ಪಿಎಂ

+ಶ್ರೀ ಸಿ. ಭೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ನಿಮಿಷ ಮಾತನಾಡುವುದಕ್ಕೆ ಇಚ್ಛಿಪಡುತ್ತೇನೆ. ನಾವು ಇವತ್ತಿನ ದಿವಸ ಅಧಿವೇಶನದ ಕೊನೆಯ ದಿವಸ ತಲುಪಿದ್ದೇವೆ. ಅಧಿವೇಶನದ ಅಚೀವ್‌ಮೆಂಟ್ ಏನೆಂದರೆ ಬಜೆಟ್ ಪಾಸಾಯಿತು, ಸರ್ಕಾರಕ್ಕೆ ಬೇಕಾಗಿರತಕ್ಕಂತಹ ಕೆಲವು ಮಸೂದೆಗಳು ಇಲ್ಲಿ ಒಪ್ಪಿಗೆಯನ್ನು ತೆಗೆದುಕೊಂಡರು. ಬಜೆಟ್ ಮತ್ತು ಕೆಲವು ಮಸೂದೆಗಳಿಗೆ ಒಪ್ಪಿಗೆಯನ್ನು ತೆಗೆದುಕೊಂಡರು. ಅದನ್ನು ಬಿಟ್ಟರೆ ವರ್ಥವೈಲ್ ಏನಾದರೂ ಕೂಡ ಮಾಡಿದ್ದೀರಾ? ಜನರಿಗೆ ಪ್ರಯೋಜನವಾಗತಕ್ಕಂತಹ ರೀತಿಯಲ್ಲಿ ಏನಾದರೂ ಕೂಡ ಆಗಿದೆಯೇ ಎಂದರೆ, ಸಾಮಾನ್ಯ ಜನತೆಗೆ ಮಾಡಿದ್ದೇವೆಂದರೆ ಇದರ ಬಗ್ಗೆ ಮಾನ್ಯ ಅಧ್ಯಕ್ಷರೆ ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಅಂತಹ ದೊಡ್ಡ ಗಳಿಕೆಯೇನೂ ಕೂಡ ಆಗಲಿಲ್ಲ. ಅಂತಹ ದೊಡ್ಡ ಪ್ರಮಾಣದಲ್ಲೂ ಕೂಡ ಜನರಿಗೆ ಪ್ರಯೋಜನವಾಗತಕ್ಕಂತಹ ಕೆಲಸವು ಈ ಅಧಿವೇಶನದಲ್ಲಿ ಆಗಲಿಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಉದಾಹರಣೆ ಯಾವುದೆಂದರೆ, ಈ ಸೀಟಿಯು ಅಧಿವೇಶನದ ಪ್ರಾರಂಭದಿಂದಲೇ ಶುರುವಾಯಿತು.

ಅಧ್ಯಕ್ಷರು:- ಮಾನ್ಯ ಭೈರೇಗೌಡರೆ, ತಮ್ಮ ಪಕ್ಷದಿಂದಲೇ ಈಗಾಗಲೇ 5 ಜನರು ಮಾತನಾಡಿದ್ದಾರೆ.

ಶ್ರೀ ಸಿ. ಭೈರೇಗೌಡ:- ಆಯಿತು, ಒಂದು ನಿಮಿಷ ತಾವು ಕೇಳಬೇಕು.

ಅಧ್ಯಕ್ಷರು:- ಇದೇ ವಿಷಯದ ಬಗ್ಗೆ ಒಂದೊಂದು ಪಕ್ಷದಿಂದ 7-7 ಜನರು ಮಾನತಾಡಿದ್ದಾರೆ. ಬೇರೆ ಯಾರೂ ಮಾತನಾಡಿಲ್ಲ.

ಶ್ರೀ ಸಿ. ಭೈರೇಗೌಡ:- ತಾವು ಹೇಳಿದ ಹಾಗೆ ನಿಜ ಇದೆಲ್ಲಾ ಆಗುತ್ತದೆ.

ಅಧ್ಯಕ್ಷರು:- ನಮ್ಮ ಮುಂದೆ ಬೇಕಾದಷ್ಟು ವಿಷಯಗಳಿವೆ.

ಶ್ರೀ ಶಿವಾನಂದ ಸಿ. ಪಾಟೀಲ್:- ಮಾನ್ಯ ಸದಸ್ಯರು ಸ್ವಲ್ಪ ಮಾತನಾಡಲಿ.

ಅಧ್ಯಕ್ಷರು:- ಮಾನ್ಯ ಶಿವಾನಂದಪಾಟೀಲರೆ, ತಾವು ಏನೂ ರೆಕ್‌ಮಂಡ್ ಮಾಡಬೇಕಾಗಿಲ್ಲ.

ಶ್ರೀ ಶಿವಾನಂದಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ರೆಕ್‌ಮಂಡ್ ಮಾಡುತ್ತಿಲ್ಲ.

ಅಧ್ಯಕ್ಷರು:- ತಾವು ದಯವಿಟ್ಟು ತಮ್ಮ ಸೀಟ್‌ನಲ್ಲಿ ಕುಳಿತುಕೊಳ್ಳಿ.

ಶ್ರೀ ಶಿವಾನಂದ ಸಿ. ಪಾಟೀಲ್:- ನಾವು ಪ್ರತಿಯೊಂದು ಸಾರಿಯೂ ನೋಡಿದ್ದೇವೆ. ತಮ್ಮ ಸೀಟಿಗೆ ಅಗೌರವ ತೋರಿಸಿ ನಾನು ರೆಕ್‌ಮಂಡ್ ಮಾಡುತ್ತಿಲ್ಲ.

ಶ್ರೀ ಸಿ. ಭೈರೇಗೌಡ:- ತಮಗೆ ಧನ್ಯವಾದಗಳು, ಈ ಸೀಇಟಿ ವಿಚಾರದ ಬಗ್ಗೆ ನಾವು ಪ್ರಾರಂಭದಲ್ಲಿಯೇ ಪ್ರಸ್ತಾಪ ಮಾಡಿದ್ದೇವೆ. ತಾವು ಹೇಳಿದ ಹಾಗೆ ಇವತ್ತೂ ಮಾತನಾಡಿರತಕ್ಕಂತಹ ಅನೇಕ ಜನರು ಎಲ್ಲಾ ಭಾಗದಿಂದಲೂ ಮಾತನಾಡಿದ್ದಾರೆ. ಆದರೆ ಇಲ್ಲಿಯವರೆವಿಗೂ ಕೂಡ ಈ ಸಮಸ್ಯೆಯ ಬಗೆಹರಿದಿಲ್ಲ. ಇದು ನಮ್ಮೆಲ್ಲರನ್ನೂ ಇವತ್ತಿನ ದಿವಸ ಚಿಂತೆಗೆ ಈಡು ಮಾಡಿರುವುದು; ಇದು ಈಗಿರುವಂತಹ ಸಮಸ್ಯೆಯಾಗಿದೆ. ಇಲ್ಲಿಯವರೆವಿಗೂ ಕೂಡ ಅದು ಬಗೆಹರಿದಿಲ್ಲ. ಪ್ರತಿ ದಿವಸಗಳು ಪತ್ರಿಕೆಗಳನ್ನು ನೋಡುತ್ತಿದ್ದರೆ ಪ್ರತಿ ದಿವಸವು ಒಂದೊಂದು ರೀತಿಯಾದ ನಿಲುವನ್ನು ಪ್ರತಿ ದಿವಸ ಒಂದೊಂದು ರೀತಿಯ ಟರ್ನ್ ಈ ವಿಚಾರವು ತೆಗೆದುಕೊಳ್ಳುತ್ತಿದೆ. ಆದ್ದರಿಂದ ಇವತ್ತಿನ ದಿವಸ ಇಂತಹ ಪ್ರಮುಖವಾದಂತಹ ವಿಚಾರ, ಇದು ಆಗಲಿಲ್ಲ. ಆದರೆ ನಾನು ಇವತ್ತಿನದಿವಸ ಕೆಲವು ವಿಚಾರಗಳನ್ನು ಸ್ಮರಿಸಿಕೊಳ್ಳಬೇಕಾಗಿದೆ. ಮೊನ್ನೆ ದಿವಸ ಇದೇ ಸದನದಲ್ಲಿ ಕರ್ನಾಟಕದ ಉತ್ತರ ಭಾಗ ಮತ್ತು ದಕ್ಷಿಣ ಭಾಗದಲ್ಲಿ ಇರತಕ್ಕಂತಹ ತಾರತಮ್ಯದ ಬಗ್ಗೆ ಎಷ್ಟೆಷ್ಟು ಕಾಳಜಿಗಳು ಏನೇನು ಆಗಿವೆ ಎನ್ನುವುದರ ಬಗ್ಗೆಯೂ ಕೂಡ ಚರ್ಚೆಯಾಯಿತು. ಉತ್ತರ ಕರ್ನಾಟಕದಲ್ಲಿರತಕ್ಕಂತಹ...

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್...

ಶ್ರೀ ಸಿ. ಭೈರೇಗೌಡ:- ಹೌದು ಸ್ವಾಮಿ, ಇಷ್ಟು ಸಿಂಪಲ್ ಆಗಿರತಕ್ಕಂತಹದ್ದನ್ನೂ ಕೂಡ, ಅವರು ಒಪ್ಪಿಕೊಂಡಿರತಕ್ಕಂತಹ ವಿಚಾರವನ್ನು ಕೂಡ ನಿಮ್ಮ ಕೈಯಲ್ಲಿ ಬಗೆಹರಿಸುವುಕ್ಕಾಗುತ್ತಿಲ್ಲ.

ಅಧ್ಯಕ್ಷರು:- ಭೈರೇಗೌಡರೆ, ತಾವು ಬೇಗನೆ ಮುಗಿಸಿ.

ಶ್ರೀ ಸಿ. ಭೈರೇಗೌಡ:- ಇವರ ಕೈಯಲ್ಲಿ ಬಗೆ ಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಇವರು ಹೇಳಬೇಕಾದ್ದನ್ನು ಏನೂ ಹೇಳುವುದಿಲ್ಲ. ಬಾಕಿ ಊರ ತುಂಬಾ ಸುತ್ತಿ ಹೇಳುತ್ತಾರೆ. ನೀವು ಒಂದು ಪಕ್ಷದ ಅಧ್ಯಕ್ಷರಾಗಿದ್ದೀರಿ, ಊರಿಗೆ ಗೌಡರೂ ಆಗಿದ್ದೀರಿ, ಇದರ ಬಗ್ಗೆ ನಾನು ಕೇಳುವುದೆಂದರೆ, ಸುಪ್ರಿಂ ಕೋರ್ಟಿನ ಹಿನ್ನೆಲೆಯಲ್ಲಿ ಯಾವ ತರಹ ತೀರ್ಮಾನ ಮಾಡಬೇಕೆಂಬುದರ ಬಗ್ಗೆ ಎರಡು ಸೆಂಟೆನ್ಸ್‌ನಲ್ಲಿ ಹೇಳಿ ನೋಡೋಣ?

ಶ್ರೀ ಸಿ. ಭೈರೇಗೌಡ:- ಇಲ್ಲಿ ಚರ್ಚೆಯಾಗಿದೆ. ಸುಪ್ರಿಂ ಕೋರ್ಟಿನ ವಿಚಾರದಲ್ಲಿ ನಮ್ಮ ಸೋಮಶೇಖರ್‌ರವು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮದು ಏನು ಸ್ಟ್ಯಾಂಡ್ ಅಂತ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ಸ್ಟ್ಯಾಂಡ್‌ನ್ನು ನಾವು ಹೇಳುತ್ತೇವೆ. ನಿಮ್ಮ ಸ್ಟ್ಯಾಂಡ್ ಏನಿದೆ ಅದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ಏನಿದೆ ಅದು ಹೇಳಿ.

(ಗೊಂದಲ)

(ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರುಗಳು ಜೆ.ಡಿ. (ಎಸ್), (ಜೆಡಿ) (ಯು) ನ ಸದಸ್ಯರುಗಳು ಸದನದ ಬಾವಿಗೆ ಬಂದರು)

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದವರು ಇದನ್ನು ಬಹಳ ಕ್ಯಾಷ್ಯುಯಲ್ ಆಗಿ ತೆಗೆದುಕೊಂಡಿದ್ದಾರೆ. ಇದು ಸರಿಯಲ್ಲ, ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಹೇಳಲಿ.

(ಗೊಂದಲ)

ಅಧ್ಯಕ್ಷರು:- ಅವರುಗಳು ಈ ರೀತಿಯಾಗಿ ಗಲಾಟೆ ಮಾಡುತ್ತಿದ್ದಾರೆ how can I listen, come on tell me. ಭೈರೇಗೌಡರೆ, ನಾನು ಹೇಗೆ ಮಾತನಾಡಲಿ ಹೇಳಿ. ಇಷ್ಟೆಲ್ಲಾ ಗಲಾಟೆ ಮಾಡುತ್ತಿದ್ದಾರೆ ನಾನು ಏನು ಮಾಡಲಿ, ಹೇಳಿ.

(ಗೊಂದಲ)

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿಯಾದರೂ ಕೂಡ ಸರ್ಕಾರವು ನಮ್ಮದು ಇದೇ ಖಚಿತವಾದ ನಿಲುವು, ಎಂಬುದನ್ನು ದಯವಿಟ್ಟು ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಣ್ಣ ನೀರಾವರಿ ಹಾಗೂ ಗೃಹ ಸಚಿವರು):- ಮಾನ್ಯ ಭೈರೇಗೌಡರೆ, ನಾನು ಹೇಳುವುದನ್ನು ಕೇಳಿ. ಈಗ ಅವರ ಉದ್ದೇಶವೇನೆಂದರೆ, ನಿಮ್ಮಲ್ಲಿ ಏನಾದರೂ ಒಂದು ಆಲ್ಟರ್‌ನೇಟೀವ್ ಸಜೆಷನ್ಸ್ ಇದ್ದರೆ ಕೊಡಿ ಅದರ ಮೇಲೆ ವಿಚಾರ ಮಾಡಿಕೊಂಡು ಇದನ್ನು ನೋಡೋಣ ಎನ್ನತಕ್ಕಂತ ದೃಷ್ಟಿಯಿಂದಾಗಿ ಹೇಳಿದರೆ ಹೊರತು ಈ ಇಷ್ಯೂವನ್ನು ಡೈಲೂಟ್ ಮಾಡಬೇಕು, ಅಥವಾ ಇದನ್ನು ಮರೆಮಾಚಬೇಕು ಇದರ ಬಗ್ಗೆ ಯಾವುದೇ ಗಂಭೀರವಾಗಿ ತೆಗೆದುಕೊಳ್ಳಬಾರದೆಂಬ ಎನ್ನತಕ್ಕಂತಹ ಉದ್ದೇಶ ಅವರದ್ದು ಇಲ್ಲ, ಸರ್ಕಾರದ್ದೂ ಕೂಡ ಇಲ್ಲ. ನಿಮಗೆ ಹೇಳಬೇಕಾದರೆ ಇವತ್ತು ಇದು ಬಹಳ ಸೀರಿಯಸ್‌ಲಿ ಯೋಚನೆ ಮಾಡುವುದಕ್ಕೋಸ್ಕರವೇ ಇದಕ್ಕಾಗಿ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ಕಾನ್ಸ್‌ಸ್ಟಿಟ್ಯೂಟ್ ಮಾಡಿರುವುದು. ವಿದ್ಯಾರ್ಥಿಗಳ ದೃಷ್ಟಿಯಿಂದ ಏನು ಅನುಕೂಲಗಳನ್ನು ನಾವು ಮಾಡಬಹುದು, In view of Supreme Court Judgement ಅಂತ ಹೇಳಿ, ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡುವುದಕ್ಕೋಸ್ಕರ ಅಡ್ವೋಕೇಟ್ ಜನರಲ್‌ರವರಿಗೆ, ಲಾ ಡಿಪಾರ್ಟ್‌ಮೆಂಟ್‌ನವರಿಗೆ ಎಲ್ಲರನ್ನೂ ಕೂಡ ಒಂದು ಸಾರಿ ಅಲ್ಲ, ಅನೇಕ ಸಾರಿ ಕರೆಸಿ ಇದರ ಬಗ್ಗೆ ವಿಚಾರ ವಿಮರ್ಶೆಗಳು ನಡೆದಿವೆ. ಆದಕ್ಕೆ ನಾವು ಹೇಗೆ ಹೌ ಟು ಓವರ್‌ಕಮ್ ಈಗ ಸಿಂಧ್ಯಾರವರು ಹೇಳಿದರಲ್ಲಾ, ಇದು ಕೇವಲ ಯಾವುದೋ ಒಂದು ಸೆಕ್ಷನ್‌ಗೆ ಎಫೆಕ್ಟ್ ಆಗುತ್ತದೆ, ಮತ್ತೊಬ್ಬರಿಗೆ ಎಫೆಕ್ಟ್ ಆಗುತ್ತದೆ ಎನ್ನತಕ್ಕಂಥದ್ದಲ್ಲ. ಇಡೀ ಸಮಾಜದ ವಿದ್ಯಾರ್ಥಿಗಳಿಗೆ ಎಫೆಕ್ಟ್ ಆಗತಕ್ಕಂತಹ ಒಂದು ಜಡ್ಜ್‌ಮೆಂಟ್ ಇದೆ. ಅದಕ್ಕೆ ಹೌ ಟು ಓವರ್ ಕಮ್ ಎನ್ನತಕ್ಕಂತಹ ದೃಷ್ಟಿಯಿಂದಲೇ ಈ ಪ್ರಯತ್ನಗಳು ನಡೆದಿದೆ. ಅದಕ್ಕಾಗಿ ಅದರ ಬಗ್ಗೆ ನಮಗೆ ಆಸಕ್ತಿ ಇಲ್ಲ, ಅಥವಾ ನಾವು ಮಾಡುತ್ತಿಲ್ಲ ಎನ್ನತಕ್ಕಂತಹ ಭಾವನೆ ಯಾರ ಹತ್ತಿರ ಇದ್ದರೂ ಕೂಡ ದಯವಿಟ್ಟು ಅದನ್ನು ತಾವು ತೆಗೆದುಹಾಕಬೇಕು. ಇದರ ಬಗ್ಗೆ ಗಂಭೀರವಾಗಿ ಆಲೋಚನೆಯನ್ನು ಮಾಡುವುದಕ್ಕೋಸ್ಕರವಾಗಿಯೇ ಇದನ್ನು ಮಾಡುತ್ತಿದ್ದೇವೆ. ಇಷ್ಟು ಮುಕ್ತವಾದಂತಹ ಫೀಸ್‌ನ್ನು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದನ್ನು ಬಡಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಿದೆಯೇ? ಕೆಲವು ಜನರಿಗೆ ಸಂಪೂರ್ಣವಾಗಿ ಅಡ್ಮಿಷನ್ ನೀವು ತೆಗೆದುಕೊಳ್ಳಬೇಕು ಎನ್ನುವುದರವರೆಗೆ ಅದು ಹೋಗಿದೆ. ಅದನ್ನು ಮಾಡಿದರೂ ಕೂಡ ನಮಗೆ ಎಷ್ಟು ಎಫೆಕ್ಟ್ ಆಗುತ್ತದೆ ಎನ್ನತಕ್ಕಂಥದ್ದರ ಬಗ್ಗೆಯೂ ಕೂಡ ಯೋಚನೆಯನ್ನು ಮಾಡಬೇಕು. ಕೆಲವು ಸಾರಿ ಅನೇಕ ಸಲ ಭಾಷೆಯ ಹೆಸರಿನಲ್ಲಿಯೇ ಮೈನಾರಿಟಿ ಎಂದು ಬಂದಿದ್ದಾರೆ, ಕೆಲವು ಕಡೆ ಧರ್ಮದ ಹೆಸರಿನಲ್ಲಿರಬಹುದು, ಆದರೆ ಕೆಲವು ಸಲ ಅನೇಕ ಕಡೆ ಭಾಷೆಯ ಹೆಸರಿನಲ್ಲಿ ಬಂದಂತಹವರು ಇದ್ದಾರೆ. ಇದರೆಲ್ಲದರ ಪರಿಣಾಮ ನಮ್ಮ ಸಮಾಜದ ವಿದ್ಯಾರ್ಥಿಗಳ ಮೇಲಾಗುತ್ತದೆ, ಅದಕ್ಕಾಗಿ ಇದನ್ನು ಯಾವ ರೀತಿಯಾಗಿ ಬಗೆಹರಿಸಬೇಕೆನ್ನುವುದಕ್ಕೆ

ಒಂದು ಸಲವಲ್ಲ ಅನೇಕ ಸಲ ಬಹುಶಃ ಈಗಾಗಲೇ ಈ ಕ್ಯಾಬಿನೆಟ್ ಕಮಿಟಿಯೂ ಕಾನ್ಸ್ಟಿಟ್ಯೂಟ್ ಆದ ಮೇಲೆ 4-5 ಮೀಟಿಂಗ್ ಮಾಡಿದ್ದಾರೆ. ಅದಕ್ಕೆ ಇದರ ಬಗ್ಗೆ ಚಿಂತನೆಯನ್ನೇ ಮಾಡುತ್ತಿಲ್ಲ ಎನ್ನುವುದು ಯಾರಾದರೂ ಅಭಿಪ್ರಾಯವಿದ್ದರೆ ಅದು ತಪ್ಪು, ತಮಗೆ ಇದರ ಬಗ್ಗೆ ಎಷ್ಟು ಕಳಕಳಿ ಮತ್ತು ಕಾಳಜಿ ಇದೆ, ಇದು ಎಲ್ಲರಿಗೂ ಇದೆ. ಇದು ಏನೋ ಈ ಕಡೆ ಕುಳಿತವರಿಗೆ ಇದೆ, ಆ ಕಡೆ ಕುಳಿತವರಿಗೆ ಇದೆ ಎನ್ನತಕ್ಕಂಥದ್ದು ಅಲ್ಲ. ಏಕೆಂದರೆ ಇದರ ಪರಿಣಾಮ ಬಹಳ ಗಂಭೀರವಾಗಿ ಆಗುತ್ತದೆ ಎನ್ನತಕ್ಕಂತಹ ದೃಷ್ಟಿಯಿಂದಲೇ ಇದರ ಬಗ್ಗೆ ಎಲ್ಲರೂ ಕೂಡ ಚಿಂತನೆಯನ್ನು ಮಾಡುತ್ತಿದ್ದಾರೆ. ಅದಕ್ಕಾಗಿ...

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮೇ 30, 31 ಎಂದು ಘೋಷಣೆ ಮಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದನ್ನು ತರಾತುರಿಯಲ್ಲಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಸಬ್‌ಕಮಿಟಿಯು ಎಷ್ಟು ಮೀಟಿಂಗ್‌ನ್ನು ಮಾಡಿದೆ. ಇವತ್ತು ನಾವು ವಿರೋಧ ಪಕ್ಷಗಳು ಸಲಹೆ ಸೂಚನೆಗಳನ್ನು ಕೊಡಿ ಎಂದು ತಾವೇ ಹೇಳಿದಿರಿ. ನಿಮ್ಮ ಸಬ್‌ಕಮಿಟಿಯಲ್ಲಿ ಏನು ನಿರ್ಣಯವಾಯಿತೆಂದು ಇವತ್ತು ಬರಬೇಕಲ್ಲವೇ? ಇವತ್ತು ತಾವು ಆಲ್ ಪಾರ್ಟಿ ಮೀಟಿಂಗ್‌ನ್ನು ಕರೆದಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದು ಅನುಕೂಲವಾಗಿಯೇ ನಿರ್ಣಯವಾಗಬೇಕಾಗಿದೆಯೇ ಹೊರತು, ಅದು ಬೇರೆಯಾಗಬಾರದು. ನಾವೂ ಕೂಡ ಅದನ್ನೇ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಇದೆಲ್ಲವೂ ಏಪ್ರಿಲ್ 3ಕ್ಕೆ ಮುಗಿದು ಹೋಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಶೆಟ್ಟರ್‌ರವರೆ,....

ಶ್ರೀ ಜಗದೀಶ್ ಶೆಟ್ಟರ್:- ಇದು ಸ್ಟ್ಯಾಂಡರ್ಡ್ ಆನ್ಸರ್, ಪ್ರತಿ ಸಲವೂ ನೀವು ಇದೇ ಸ್ಟ್ಯಾಂಡರ್ಡ್ ಆನ್ಸರನ್ನೇ ಕೊಡುತ್ತಿದ್ದೀರಿ. ಯಾವಾಗ ತಾವು ನಿರ್ಣಯವನ್ನು ಅದರ ಬಗ್ಗೆ ಕೈಗೊಳ್ಳುತ್ತೀರಿ? ಎಲ್ಲಾ ಲಗ್ಗೆ ಹಾಕಿದ ಮೇಲೆ ಕೋಟೆ ಬಾಗಿಲು ಮುಚ್ಚಿದ ಮೇಲೆ ಹೇಳುತ್ತೀರಾ? ಏಪ್ರಿಲ್ 3ನೇ ತಾರೀಖಿನಿಂದ ಪ್ರೋಸೆಸ್ ಚಾಲೂ ಆಗುತ್ತದೆ. ಏಪ್ರಿಲ್ 3 ರಿಂದ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಅಡ್ಮಿಷನ್ ಮಾಡಲಿಕ್ಕೆ ಪ್ರಾರಂಭ ಮಾಡುತ್ತಾರೆ. ಯಾವಾಗ ನಿರ್ಣಯವನ್ನು ಕೈಗೊಳ್ಳುತ್ತೀರಿ? ಸಬ್ ಕಮಿಟಿಯನ್ನು ಮಾಡಿದ್ದೀರಲ್ಲಾ ಆ ಸಮಿತಿಯಲ್ಲಿ ಏನು ಚರ್ಚೆಯಾಗಿದೆ?

ಅಧ್ಯಕ್ಷರು:- ಅವರು ಉತ್ತರವನ್ನು ಕೊಡುತ್ತಿದ್ದಾರೆ. ತಾವು ದಯವಿಟ್ಟು ಸುಮ್ಮನಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಸಬ್ ಕಮಿಟಿಯವರು ಮಾಡುತ್ತಿದ್ದಾರೆ. ಸರ್ಕಾರ ಅಸಹಾಯಕವಾಗಿದೆ, ಅಥವಾ ಸರ್ಕಾರಕ್ಕೆ ಶಕ್ತಿಯಿಲ್ಲ ಎನ್ನತಕ್ಕಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಕಾನೂನಿನ ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ಜಡ್ಜ್‌ಮೆಂಟನ್ನು ನೋಡಿಕೊಂಡು ಎದುರಿಗೆ ಇಟ್ಟು ಸಾರ್ವಜನಿಕ ವಿದ್ಯಾರ್ಥಿಗಳಿಗೆ ಏನು ಉಪಯೋಗವಾಗುತ್ತದೆ ಆ ದೃಷ್ಟಿಯಿಂದಲೇ ಹೆಜ್ಜೆ ಇಡುತ್ತೇವೆಯೇ ಹೊರತಾಗಿ ವಿದ್ಯಾರ್ಥಿಗಳ ಹಿತದ ವಿರುದ್ಧ ಎಂದೂ ಕೂಡ ಈ ಸರ್ಕಾರವು ನಡೆದುಕೊಳ್ಳುವುದಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಸೆಪ್ಟೆಂಬರ್‌ನಲ್ಲಿ ಜಡ್ಜ್‌ಮೆಂಟಾಗಿದೆ, ಇದುವರೆವಿಗೂ ಇವರು ನಿರ್ಣಯವನ್ನು ಕೈಗೊಳ್ಳುವುದಕ್ಕಾಗಲಿಲ್ಲ. ಸಬ್‌ಕಮಿಟಿ ಮತ್ತು ಎಲ್ಲವನ್ನೂ ಮಾಡಿದರೂ ಅಕ್ಟೋಬರ್‌ನಲ್ಲಿಯೂ ಕೂಡ ನಿರ್ಣಯವಾಗಿದೆ ಇದುವರೆವಿಗೂ ಇವರು ಡಿಸಿಷನ್‌ನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಇನ್ನು ತಾವು ಎಷ್ಟು ದಿವಸಗಳ ಕಾಲ ಆಲೋಚನೆಯನ್ನು ಮಾಡುತ್ತೀರಿ? ಒಂದು ವರ್ಷವೋ ಅಥವಾ 2 ವರ್ಷವೋ ಎಲ್ಲಿಯವರೆವಿಗೆ ತಾವು ಈ ನಿರ್ಣಯವನ್ನು ತೆಗೆದುಕೊಳ್ಳುವುದು? ಇವತ್ತು ಬಿಲ್‌ನ್ನು ತರಬೇಕಾಗಿತ್ತಲ್ಲಾ, ನೀವು ಒಂದು ಬಿಲ್‌ನ್ನು ತರುತ್ತೇನೆಂದು ಹೇಳಿದ್ದರಲ್ಲಾ ಹಾಗಾದರೆ ಏತಕ್ಕಾಗಿ ಅದನ್ನು ತರಲಿಲ್ಲ? ಮಾನ್ಯ ಶಿವಕುಮಾರ್ ಹೇಳಿದರಲ್ಲಾ, ಇವತ್ತು ಸೆಲ್ಫ ಅಸೆಸ್‌ಮೆಂಟ್ ಟ್ಯಾಕ್ಸ್ ಬಗ್ಗೆ ಬಿಲ್‌ನ್ನು ತೆಗೆದುಕೊಂಡು ಬರುತ್ತೇವೆಂದು ಅದು ಹಾಗೆಯೇ ಉಳಿಯಿತು. ಇದು ಹಾಗೆಯೇ ಆಗುತ್ತದೆ. ಸುಮ್ಮನೆ ಒಂದು ಸಬೂಬನ್ನು ಹೇಳುತ್ತೀರಿ. ನಿಮ್ಮ ಸರ್ಕಾರದ ನಿಲುವೇನು ಎಂಬುದರ ಬಗ್ಗೆ ಸ್ಪಷ್ಟನೆ ಮಾಡಬೇಕಾಗುತ್ತದೆ. ಸ್ಪಷ್ಟನೆ ಮಾಡುವ ತನಕ ನಾವು ಸುಮ್ಮನಿರುವುದಿಲ್ಲ.

+ ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿರುವಂತಹ ಮಾತನ್ನು ಬಹಳ ನಿಶಬ್ದತೆಯಿಂದ ಕೇಳಿದ್ದೇನೆ. ಅವರು ಮಾತನಾಡಿದ ಮೇಲಾದರೂ ಕೂಡ ಈ ಸಮಸ್ಯೆಗೆ ಏನಾದರೂ ಕೂಡ ಪರಿಹಾರ ಸಿಕ್ಕಿದೆ ಎಂದರೆ ಅದು ಸಿಗಲಿಲ್ಲ. ಏಕೆಂದರೆ, ಈಗ ಆಡಳಿತ ವರ್ಗದವರು ಬರುತ್ತಿರುವಂತಹ 3ನೇ ತಾರೀಖಿನ ದಿವಸ ಅವರ ಕೆಲಸವನ್ನು ಚಾಲೂ ಮಾಡುವುದರಲ್ಲಿದ್ದಾರೆ. ಅನೇಕರು ಅಲ್ಲಿ ಹಣ ಕಟ್ಟುವವರು ಅಲ್ಲಿ ಕೊಟ್ಟು ಸೀಟನ್ನು ರಿಸರ್ವ್ ಮಾಡತಕ್ಕಂತಹವರು ಇದ್ದಾರೆ. ಅವರು ಮತ್ತೆ ಅಡ್ಮಿಷನ್‌ನ್ನೂ ಕೂಡ ಪ್ರಾರಂಭ ಮಾಡತಕ್ಕಂತವರು ಇದ್ದಾರೆ. ಒಂದು ಕಡೆ ಸರ್ಕಾರ ಆಲೋಚನೆಯನ್ನು ತಳೆದಿರುವಂತಹ ಸಂದರ್ಭದಲ್ಲಿ ಅವರು ಮ್ಯಾನೇಜ್‌ಮೆಂಟ್‌ನವರು ಇವತ್ತಿನ ದಿವಸ ಕ್ರಮವನ್ನು ಕೈಗೊಂಡು ಸಾರ್ವಜನಿಕರ ಹತ್ತಿರ ಹಣವನ್ನು ವಸೂಲಿ ಮಾಡಿ ಅಕಸ್ಮಾತ್ ಏನಾದರೂ ಒಂದು ವೇಳೆ ಸರ್ಕಾರ ಬೇರೆ ರೀತಿಯಾದಂತಹ, ನಾವು ಹೇಳಿದಂತಃ ರೀತಿಯಲ್ಲಿ ತೀರ್ಮಾನವನ್ನು ನೀವು ತೆಗೆದುಕೊಂಡಿರಿ, ಆಗ ಹಣವನ್ನು ಕಟ್ಟಿರುವಂತಹವರಿಗೆ ಯಾರು ದಿಕ್ಕು? ಅನಾವಶ್ಯಕವಾಗಿ ಇವತ್ತಿನ ದಿವಸ ಜನತೆಯನ್ನು ಗೊಂದಲಕ್ಕೆ ಈಡು ಮಾಡುವಂತಹ ಕೆಲಸವನ್ನು ಸರ್ಕಾರದಿಂದ ಆಗುತ್ತಿದೆ. ಈ ಗೊಂದಲವನ್ನು ಬಗೆ ಹರಿಸಿ ಎನ್ನತಕ್ಕಂಥದ್ದೆ ನಮ್ಮ ಆಗ್ರಹವಾಗಿದೆ. ಎಕ್ಸ್‌ಪರ್ಟ್ ಕಮಿಟಿಯಾಯಿತು, ಕ್ಯಾಬಿನೆಟ್ ಸಬ್ ಕಮಿಟಿಯಾಯಿತು, ಆಲ್‌ಪಾರ್ಟಿ ಮೀಟಿಂಗ್ ಆಯಿತು, ಇವುಗಳೆಲ್ಲದರ ಪ್ರತಿಫಲ ಏನೆಂದರೆ ಶೂನ್ಯ. ಇವತ್ತು ಸದನದ ಅಧಿವೇಶನವೂ ಕೂಡ ಮುಗಿಯುತ್ತಾ ಬಂದಿದೆ. ಅಧಿವೇಶನ ಮುಗಿದರೂ ಕೂಡ ಈ ಸಮಸ್ಯೆಗೆ ಪರಿಹಾರ ದೊರಕದೆ ಇರುವ ಕಾರಣದಿಂದಾಗಿ, ಇವತ್ತು ನಾವು ಈ ರೀತಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಮುಂದಾಗಿರುವುದು. ಸಾಮಾನ್ಯ ಜನರ ಸಮಸ್ಯೆ ಇದಾಗಿದೆ, ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳು ವಸೂಲಿಯಾಗುತ್ತಿದೆ. ಅದಕ್ಕೆಲ್ಲಾ ಯಾರು ಜವಾಬ್ದಾರರಾಗುತ್ತಾರೆ? ಸರ್ಕಾರವೇನಾದರೂ ಜವಾಬ್ದಾರಿಯಾಗುತ್ತದೆಯೇ? ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟಿನ ತೀರ್ಮಾನದ ಹಿನ್ನೆಲೆ ಎನ್ನುವುದನ್ನು ಹೇಳುತ್ತಾರೆ. ಕೋರ್ಟಿನ ಆಜ್ಞೆಯನ್ನು ಕಾನೂನು ಮಾಡುವುದರ ಮೂಲಕ ಇದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕು, ಕೋರ್ಟಿನ ಆಜ್ಞೆಯನ್ನು ಕಾನೂನು ಮಾಡುವುದರ ಮೂಲಕ ನಲ್ ಅಂಡ್ ವಾಯ್ಡ್ ಮಾಡಿರತಕ್ಕಂತ ನಿದರ್ಶನಗಳು

ಇವತ್ತಿನ ದಿವಸ ದೇಶದಲ್ಲಿದೆ. ಶ್ರೀಮತಿ ಇಂದಿರಾಗಾಂಧಿಯವರು ಇದ್ದಂತಹ ಸಂದರ್ಭದಲ್ಲಿ ಏನು ನಡೆಯಿತು ಎನ್ನತಕ್ಕಂಥಹದ್ದನ್ನು ತಾವು ಜ್ಞಾಪಕದಲ್ಲಿಟ್ಟುಕೊಳ್ಳಿ. ಇವತ್ತಿನ ದಿವಸ ಅಂತಹ ಕ್ರಮಗಳು ಇದಕ್ಕೆ ಅವಶ್ಯಕತೆ ಇದೆ. ಕೋರ್ಟ್ ಆಜ್ಞೆಯಾಯಿತು ನಾವು ಏನೂ ಮಾಡುವುದು ಎಂದು ಕೈಕಟ್ಟಿ ಕುಳಿತುಕೊಳ್ಳುವುದಲ್ಲ, ಸರ್ಕಾರಕ್ಕೆ ಮತ್ತು ಪಾರ್ಲಿಮೆಂಟ್‌ಗೆ ಅಸೀಮಿತವಾದಂತಹ ಅಧಿಕಾರ ಈ ಸದನಕ್ಕೂ ಮತ್ತು ಪಾರ್ಲಿಮೆಂಟ್‌ಗೂ ಕೂಡ ಇದೆ. ಆ ಅಧಿಕಾರವನ್ನು ಬಳಸಿಕೊಳ್ಳುವುದಕ್ಕೆ ಸರ್ಕಾರವು ಮುಂದಾಗಬೇಕು. ಜನರ ಹಿತವನ್ನು ಕಾಪಾಡಬೇಕೆಂದಿದ್ದರೆ, ಈ ಎರಡೂ ಸದನಗಳನ್ನು ಬಳಸಿಕೊಳ್ಳುವುದಕ್ಕೆ ತಾವು ಮುಂದಾಗುವಂತಹ ಅವಶ್ಯಕತೆಯೂ ಕೂಡ ಇದೆ. ನಾವೂ ಇನ್ನೂ ಯೋಚನೆಯನ್ನು ಮಾಡುತ್ತಿದ್ದೇವೆ, ಸುಪ್ರಿಂ ಕೋರ್ಟಿನ ಆರ್ಡರ್ ಆಗಿದೆ ಅದೇ ಮಂತ್ರವನ್ನು ಜಪಿಸುತ್ತಾ ಕುಳಿತುಕೊಂಡರೆ ಜನರ ಸಮಸ್ಯೆಯನ್ನು ಇವತ್ತು ಬಗೆ ಹರಿಯುವುದಿಲ್ಲ. ಅದನ್ನು ಇವತ್ತಿನ ದಿವಸ ಗಮನದಲ್ಲಿಟ್ಟುಕೊಂಡು ಕಾನೂನನ್ನು ತಿದ್ದುಪಡಿ ಮಾಡುವುದಕ್ಕೂ ಕೂಡ ತಾವು ಮುಂದಾಗಬೇಕು. ಇಲ್ಲೆ ಆಗದೇ ಇದ್ದರೆ ಲೋಕಸಭೆಯಲ್ಲಿ ಪಾರ್ಲಿಮೆಂಟ್‌ನಲ್ಲಿ ಕಾನೂನನ್ನು ತಿದ್ದುಪಡಿ ಮಾಡಿಸುವುದಕ್ಕೆ ತಾವು ಮುಂದಾಗಬೇಕು. ಈ ಕೆಲಸವನ್ನು ತಾವು ದಯವಿಟ್ಟು ಮಾಡಬೇಕೆನ್ನುವಂತಹ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಸರ್ಕಾರದ ನಿರ್ದಿಷ್ಟವಾದ ಉತ್ತರವೇನು ಎನ್ನುವುದನ್ನು ಬಯಸಿ ನಾವು ಧರಣಿಯಲ್ಲಿ ಭಾಗವಹಿಸುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ಶೆಟ್ಟರ್‌ರವರೆ, ಭೈರೇಗೌಡರೆ, ಮಾನ್ಯ ಸಿಂಧ್ಯಾರವರೆ ಒಂದು ಕೆಲಸವನ್ನು ಮಾಡೋಣ. ಈಗ ಈ ಗೊಂದಲವನ್ನು ನಿವಾರಣೆ ಮಾಡುವುದಕ್ಕಾಗಿ...

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಈಗ...

ಅಧ್ಯಕ್ಷರು:- ನನ್ನ ಸಲಹೆಯನ್ನು ಕೇಳುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಕೇಳುತ್ತೇವೆ.

ಅಧ್ಯಕ್ಷರು:- ಇಷ್ಟು ಹೊತ್ತು ನಿಮ್ಮ ಸಲಹೆಯನ್ನು ನಾನು ಕೇಳಿದ್ದೇನೆ. ಆದರೆ ನನ್ನ ಸಲಹೆಯನ್ನು ತಾವು ಕೇಳಬೇಕಲ್ಲವೇ? ಈ ಗೊಂದಲವನ್ನು ನಿವಾರಣೆ ಮಾಡುವುದಕ್ಕಾಗಿ ಕಾಲು ಗಂಟೆಗಳ ಕಾಲ ಸದನವನ್ನು ಮುಂದೂಡುತ್ತೇನೆ. ಎಲ್ಲಾ ನಾಯಕರನ್ನು ಕರೆಸಿ ನಾವು ಮಾತನಾಡೋಣ.

(ಸದನವು 15 ನಿಮಿಷಗಳ ವರೆಗೆ ಮುಂದೂಡಲ್ಪಟ್ಟಿತು).

ಸದನವೂ ಪುನಃ 1.25ಕ್ಕೆ ಸಮಾವೇಶಗೊಂಡಿತ್ತು, ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು.

(ವಿರೋಧ ಪಕ್ಷದ ವಿವಿಧ ನಾಯಕರುಗಳು ಹಾಗೂ ಸದಸ್ಯರುಗಳು ಬಾವಿಯಲ್ಲಿ)

(ಗೊಂದಲ)

ಅಧ್ಯಕ್ಷರು:- ಈಗ ಕೆಲವು ವಿಷಯಗಳನ್ನು ಎಲ್ಲಾ ಮಾನ್ಯ ವಿರೋಧ ಪಕ್ಷದವರು ಮತ್ತು ಸರ್ಕಾರದವರು ನಮ್ಮ ಛೇಂಬರ್ಸ್‌ನಲ್ಲಿ ಮಾತನಾಡಿದ್ದಾರೆ. ಈಗ ಸದನವನ್ನು ಪುನಃ 3.00 ಗಂಟೆವರೆಗೆ ಮುಂದೂಡುತ್ತಿದ್ದೇವೆ.

(ಸದನವು ಮಧ್ಯಾಹ್ನ 1.26ಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠದಲ್ಲಿದ್ದರು)

(ಸದನದ ಬಾವಿಯಲ್ಲಿ ಭಾರತೀಯ ಜನತಾ ಪಕ್ಷ ಮತ್ತು ಜನತಾ ದಳ (ಯು) ಪಕ್ಷದ ಸದಸ್ಯರುಗಳು ಧರಣಿ ನಿರತರಾಗಿದ್ದರು).

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

(ಗೊಂದಲ)

ಅಧ್ಯಕ್ಷರು:- ತಾವು ಸದನದ ಬಾವಿಯಿಂದ ಮಾತನಾಡಬೇಡಿ. ತಾವು ಮಾತನಾಡಬೇಕೆಂದಿದ್ದರೆ ದಯವಿಟ್ಟು ತಮ್ಮ ಸೀಟಿಗೆ ಹಿಂದಿರುಗಿ ಮಾತನಾಡಿ.

(ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- ಸಿ.ಇ.ಟಿ. ಬಗ್ಗೆ ಸರ್ಕಾರದವರು ಸ್ಪಷ್ಟವಾದ ನಿರ್ಧಾರ ಪ್ರಕಟಿಸದೇ ಇರುವ ಬಗ್ಗೆ

(ಧರಣಿ) (ಮುಂದುವರೆದ ಚರ್ಚೆ)

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- (ಸದನ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂದಿರುಗಿ):- ಮಾನ್ಯ ಅಧ್ಯಕ್ಷರೆ, ನಾವು ಈ ಬಗ್ಗೆ ಮೊದಲಿನಿಂದಲೂ ಒತ್ತಾಯ ಮಾಡುತ್ತಿದ್ದೇವೆ. ಈ ಸಿ.ಇ.ಟಿ. ವ್ಯವಸ್ಥೆ ಬಗ್ಗೆ ನಮಗೆ ಸರ್ಕಾರದಿಂದ ಸ್ಪಷ್ಟವಾದಂತಹ ಉತ್ತರ ಬೇಕು ಮತ್ತು ಆ ಬಗ್ಗೆ ಸರ್ಕಾರ ತನ್ನ ಸ್ಪಷ್ಟವಾದಂತಹ ನಿಲುವನ್ನು ವ್ಯಕ್ತಪಡಿಸಬೇಕು ಎನ್ನುವಂತಹ ಒತ್ತಾಯವನ್ನು ನಾವು ಬೆಳಿಗ್ಗೆಯಿಂದಲೂ ಮಾಡುತ್ತಾ ಬಂದಿದ್ದೇವೆ. 10ನೇ ತಾರೀಖಿನಿಂದ ಇಲ್ಲಿಯವರೆಗೆ ಸಾಕಷ್ಟು ಸಂದರ್ಭದಲ್ಲಿ ಈ ಬಗ್ಗೆ ಚರ್ಚೆಯಾದಾಗಲೆಲ್ಲಾ ನಾವು ಆ ಒತ್ತಾಯ ಮಾಡಿದ್ದೇವೆ. ಆ ಬಗ್ಗೆ ಸರ್ಕಾರದವರು ಸಚಿವ ಸಂಪುಟದ ಉಪ ಸಮಿತಿಯೊಂದನ್ನು ಮಾಡಿದರು, ಆಲ್ ಪಾರ್ಟಿ ಮೀಟಿಂಗ್ ಕೂಡ ಆಯಿತು. ಆದರೆ ಅದರ ಫಲಶ್ರುತಿ ಏನಾಯಿತು ಎಂಬ ಬಗ್ಗೆ ಸರ್ಕಾರದಿಂದ ಯವುದೇ ಉತ್ತರ ಬರುತ್ತಿಲ್ಲ. ನಮಗೆ ಇನ್ನೂ ಸಮಯಬೇಕು. ಈ ಬಗ್ಗೆ ಇಷ್ಟರಲ್ಲೇ ಕ್ಯಾಬಿನೆಟ್‌ನಲ್ಲಿ ನಾವು ತೀರ್ಮಾನ ತೆಗೆದುಕೊಳ್ಳುವವರಿದ್ದೇವೆ ಎನ್ನುವ ಮಾತನ್ನು ಸರ್ಕಾರದವರು ಹೇಳುತ್ತಿದ್ದಾರೆ. ಇದರಲ್ಲಿ ಸರ್ಕಾರದವರ ಸಂಪೂರ್ಣವಾದಂತಹ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿತನ ಎದ್ದು ಕಾಣುತ್ತಿದೆ. ಇದೇ ರೀತಿಯಲ್ಲಿ ವ್ಯವಸ್ಥೆ ಮುಂದುವರೆದರೆ, ನಮ್ಮ ಇಡೀ ವಿದ್ಯಾರ್ಥಿ ಸಮುದಾಯಕ್ಕೆ ಕಷ್ಟವಾಗುತ್ತದೆ. ಬಡ ವಿದ್ಯಾರ್ಥಿಗಳಿಗೆ ಇವತ್ತು ಸಾಮಾಜಿಕ ನ್ಯಾಯವನ್ನು ನಾವೇನು ಕೊಡಿಸುತ್ತಿದ್ದೇವೋ ಆ ಒಂದು ಸಾಮಾಜಿಕ ನ್ಯಾಯಕ್ಕೆ ಹೊಡೆತ ಬೀಳುವಂತಹ ವಾತಾವರಣ ಇವತ್ತು ಕರ್ನಾಟಕ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಇವತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಮತ್ತು ಸರ್ಕಾರಕ್ಕೂ ಯಾವುದೇ ರೀತಿಯಾದಂತಹ ವ್ಯತ್ಯಾಸ ನಮಗೆ ಕಾಣುತ್ತಿಲ್ಲ. ಅಕ್ಟೋಬರ್‌ನಲ್ಲಿ ಜಡ್ಜ್‌ಮೆಂಟ್ ಆದ ಮೇಲೆ ಇಲ್ಲಿಯವರೆಗೂ ಸರ್ಕಾರ ಏನು ಮಾಡಿತು? ಇದರ ಬಗ್ಗೆ ಸರ್ಕಾರ ಏನು ಪ್ರೋಗ್ರೆಸ್ ಮಾಡಿದೆ ಎಂಬುದು ನಮಗೆ ತಿಳಿದಿಲ್ಲ. ಇದರ ಬಗ್ಗೆ ಸರ್ಕಾರಿ ತನ್ನ ಸ್ಪಷ್ಟ ನೀತಿಯನ್ನು ವ್ಯಕ್ತಪಡಿಸಿಲ್ಲ. ಇಂದು ಅಧಿವೇಶನದ ಕೊನೆಯ ದಿವಸವಾಗಿದೆ. ಅಧಿವೇಶವದ ಕೊನೆಯ ದಿವಸದೊಳಗಾದರೂ ಸರ್ಕಾರದವರು

ಯಾವುದೇ ನಿರ್ಣಯ ಕೈಗೊಳ್ಳದೇ, ನಮಗೆ ಇನ್ನೂ ಸ್ವಲ್ಪ ಸಮಯಾವಕಾಶ ಕೊಡಿ ಎಂದು ಕೇಳಿದರೆ, ಇದರಲ್ಲಿ ಏನೂ ಅರ್ಥವಿಲ್ಲ? ಇದರಿಂದಾಗಿ ಈ ದಿಸೆಯಲ್ಲಿ ಸರ್ಕಾರದ ನಿಲುವು ಏನು ಎಂಬುದು ನಮಗೆ ಅರ್ಥವಾಗುತ್ತಿದೆ. ಇದನ್ನು ನಾವು ಪ್ರತಿಭಟಿಸುತ್ತಾ ನಮ್ಮ ಧರಣಿಯನ್ನು ಮುಂದುವರೆಸುತ್ತಿದ್ದೇವೆ.

(ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೊಮ್ಮೆ ಸದನದ ಬಾವಿಗೆ ಹಿಂತಿರುಗಿ ಧರಣಿ ನಿರತರಾದರು).

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಅಧ್ಯಕ್ಷರೇ, ಈ ತಿಂಗಳು 30 ದಿವಸದಿಂದಲೂ ಕೂಡ ಸಿ.ಇ.ಟಿ. ಬಗ್ಗೆ ತೀರ್ಮಾನ ಮಾಡುತ್ತೇವೆ, ರಾಜ್ಯದ ಸಾಮಾನ್ಯ ಮತ್ತು ಬಡ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಡುತ್ತೇವೆ ಎಂದು ಸರ್ಕಾರ ಹೇಳುತ್ತಲೇ ಬಂದಿದೆ. ಅದರಲ್ಲಿ ಸರ್ಕಾರ ವಿಫಲವಾಗಿದೆ, ಮಾನ್ಯ ಅಧ್ಯಕ್ಷರೂ ಕೂಡ ಮಾನ್ಯ ಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದರು. ಆದರೆ ಮಾನ್ಯ ಮಂತ್ರಿಗಳೂ ಕೂಡ ಉತ್ತರ ಕೊಟ್ಟಿಲ್ಲ. ಸರ್ಕಾರ ಸಿ.ಇ.ಟಿ. ಬಗ್ಗೆ ತನ್ನ ಸಮಂಜಸವಾದ ನಿಲುವನ್ನು ವ್ಯಕ್ತಪಡಿಸದೇ ಇರುವುದನ್ನು ಪ್ರತಿಭಟಿಸಿ ಇತರ ವಿರೋಧ ಪಕ್ಷಗಳ ಶಾಸಕರುಗಳೊಂದಿಗೆ ನಮ್ಮ ಪಕ್ಷದ ಶಾಸಕರೂ ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇವೆ.

(ಈ ಹಂತದಲ್ಲಿ ಜನತಾ ದಳ (ಎಸ್) ಪಕ್ಷದ ಶಾಸಕರೂ ಕೂಡ ಶ್ರೀ ಚನ್ನಿಗಪ್ಪನವರ ನೇತೃತ್ವದಲ್ಲಿ ಧರಣಿಯಲ್ಲಿ ಪಾಲ್ಗೊಳ್ಳಲು ಸದನದ ಬಾವಿಗೆ ಆಗಮಿಸಿದರು).

ಅಧ್ಯಕ್ಷರು:- ಮಾನ್ಯ ಸಂಪಂಗಿಯವರೇ, ತಾವು ಏನೋ ಒಂದು ವಿಷಯವನ್ನು ಪ್ರಸ್ತಾಪಿಸಬೇಕೆಂದಿದ್ದಿರಿ.

ವಿಷಯ:- (ಅ) ಬಾಗೇಪಲ್ಲಿ ವಿಧಾನ ಸಭೆ ಕ್ಷೇತ್ರದಲ್ಲಿನ ಆಸ್ಪತ್ರೆಗೆ ವಿದ್ಯುತ್ ಸಂಪರ್ಕ ನಿಲುಗಡೆ ಮಾಡಿರುವ ಬಗ್ಗೆ

ಶ್ರೀ ಎನ್. ಸಂಪಂಗಿ:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಪ್ರಸ್ತಾಪಿಸುತ್ತಿಲ್ಲ. ನಮ್ಮ ಕ್ಷೇತ್ರದ ಆಸ್ಪತ್ರೆಯೊಂದರಲ್ಲಿ ಏನಾಗಿದೆ ಎಂದರೆ, ಮೊನ್ನೆ ಬಿಲ್ ಕಟ್ಟಿಲ್ಲವೆಂದು ಸಂಪರ್ಕ ಕಡಿತಗೊಳಿಸಿದ್ದರಿಂದಾಗಿ ಅಲ್ಲಿ ತೀವ್ರ ತೊಂದರೆಯಾಗಿದೆ.

(ಗೊಂದಲ)

ಅಧ್ಯಕ್ಷರು:- ತಾವು ಯಾವ ರೀತಿಯಾಗಿ ಇವತ್ತು ಸಿ.ಇ.ಟಿ. ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಿರೋ, ಅದೇ ರೀತಿಯಲ್ಲಿ ಅವರ ಕ್ಷೇತ್ರದ ಸಮಸ್ಯೆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಅವರಿಗೂ ಸಹ ಹಕ್ಕಿದೆ. This is zero hour. He has got the right. ದಯವಿಟ್ಟು ಸುಮ್ಮನಿರಿ.

(ಗೊಂದಲ)

ಅಧ್ಯಕ್ಷರು:- ನೀವು ಹೇಳಿದ್ದನ್ನು ಮಾತ್ರ ನಾವು ಕೇಳಬೇಕು. ಅವರು ಹೇಳಿದ್ದನ್ನು ಕೇಳಬಾರದೇ? ಅದಕ್ಕೆ ನಮಗೆ ಹಕ್ಕಿಲ್ಲವೇ? ಅವರು ಅವರ ಸೀಟ್‌ನಲ್ಲಿ ನಿಂತು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಹೌಸ್ ಆರ್ಡರ್ ನಲ್ಲಿದೆಯೇ?

ಅಧ್ಯಕ್ಷರು:- ಹೌಸ್ ಆರ್ಡರ್‌ನಲ್ಲಿದೆ, Shall I read the rules?